Pratiṣṭhāpaka Saṃrakṣaka

**PARAMA PŪJYA ŚRĪ VIŚVEŚATĪRTHA ŚRĪPĀDA**

PEJĀVARA ADHŌKṢAJA MAṬHA


दशप्रमतिं जनयन्त योषणः

pūrṇapramati

A Center for Integrated Learning

ಪ್ರಕಟಣೆ : ಪ್ರಶಿಕ್ಷಣ ವಿಭಾಗ


# पूर्णशिक्षा


ಅಕ್ಟೋಬರ್ ಮತ್ತು ನವೆಂಬರ್ 2023


# ಪೂರ್ಣಶಿಕ್ಷಾ pūrṇaśikṣā

ದ್ವೈ ಮಾಸಿಕ ವಾರ್ತಾಪತ್ರಿಕೆ Bi-monthly News Letter

## ಸಂಚಿಕೆಯ ವಿಶೇಷ : ರಾಮಮಂದಿರದಿಂದ ರಾಮರಾಜ್ಯದೆಡೆಗೆ

'ಚಿಂತಕರ ಚಾವಡಿ'
ಚಿಂತಕರ ಲೇಖನಗಳ ಮಾಲೆ



# ಸಂಪಾದಕೀಯ

## ಪೂರ್ಣಪ್ರಮತಿ ಪ್ರಶಿಕ್ಷಣ ತಂಡ

**ಆತ್ಮೀಯ ಜಿಜ್ಞಾಸುಗಳೇ,**

ಕಲಿಕೆಯ ಮೂಲ ಸೂತ್ರವನ್ನೇ ಹಿಡಿದು ಜ್ಞಾನದ ಬೆಳಕಿನತ್ತ ಮೊಗಮಾಡಿ ಹೊರಟಿದೆ ಪೂರ್ಣಪ್ರಮತಿ. ಕಲಿಕೆ ಎಂದರೇನು? ಯಾವುದು ನಿಜವಾದ ಕಲಿಕೆ? ಕಲಿಕೆಯಾಗಿದೆ ಎಂಬುದರ ದೃಢೀಕರಣ ಏನು? ಎಂಬಿತ್ಯಾದಿ ಉತ್ತರಗಳ ನಿರೀಕ್ಷೆಯಲ್ಲಿರುವಾಗ, ಕಳೆದ ೧೩ ವರ್ಷಗಳ ಸತತ ಪರಿಶ್ರಮ, ಪ್ರಯೋಗಗಳ ಮೂಲಕ ಕಲಿಕೆಯ ಮಾರ್ಗವನ್ನು ಪೂರ್ಣಪ್ರಮತಿ ಕಂಡುಕೊಂಡದ್ದು ಹೀಗೆ. ಕಲಿಕೆ ಎಂಬುದು ಏಕಮುಖವಾಗಿರದೇ, ಆರಾಮದಾಯಕ ವಲಯಕ್ಕೆ ಅಂಟಿಕೊಂಡಿರದೇ ಬಹುಮುಖವಾಗಿ ಹರಡುವಲ್ಲಿ ನಡೆಸುವ ತಪಸ್ಸೇ ಕಲಿಕೆಯಾಗಿದೆ. ತಪಸ್ಸು - ಚಿಂತನೆ - ಪ್ರಯೋಗ - ಕಲಿಕೆ - ಜ್ಞಾನಾರ್ಜನೆ. ಅದರಲ್ಲಿಯೂ ಸಮಾಜ ಸುಸ್ಥಿರ ಆಗಬೇಕಾದಲ್ಲಿ ಶಿಕ್ಷಣ ವ್ಯವಸ್ಥೆ ಗಟ್ಟಿಯಾಗಬೇಕು. ಏನೇ ಬದಲಾವಣೆಗಳಾದರೂ ಶಿಕ್ಷಣ ವ್ಯವಸ್ಥೆ ಮೊದಲ ಮಟ್ಟಿಲಾಗಬೇಕು.

ಇದೇ ನಿಟ್ಟಿನಲ್ಲಿ ಯೋಚನೆ ಮಾಡುತ್ತಾ, ವಿವಿಧ ವಿಷಯಗಳಲ್ಲಿ ಅನೇಕ ಆಯಾಮಗಳಲ್ಲಿ ಅಧ್ಯಯನ ಮಾಡಿದ ಚಿಂತಕರ ಪರಿಣತಿಯ ಬರಹಗಳ ಮೂಲಕ ಎಲ್ಲರ ತಪಸ್ಸಿಗೊಂದು ಮಾರ್ಗಸೂಚಿಯನ್ನು ನೀಡುವ ದೃಷ್ಟಿಯಲ್ಲಿ ಹೊರಟಿರುವುದೇ ಪ್ರಶಿಕ್ಷಣ ಪತ್ರಿಕೆಯಾಗಿದ್ದು, ಚಿಂತನ ಮಂಥನದ, ಆಳವಾದ ಅಧ್ಯಯನದ ಸರಣಿ ಲೇಖನಗಳನ್ನು ನಾವಿಲ್ಲಿ ಕಾಣಬಹುದು.

ಅನುಭವಿಗಳು ಅನನುಭವಿಗಳನ್ನು ಮಾಗುವಂತೆ ಮಾಡುವುದೇ ನಮ್ಮ ಪರಂಪರೆಯಾಗಿದ್ದು, ಅನುವಾದ, ಆಳ ಅಧ್ಯಯನ, ಅನುಭವಗಳ ಹಂಚಿಕೆಯ ಘಟ್ಟಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಪರಿಸರ ಅಧ್ಯಯನದ ಮಹತ್ವ ಅವಶ್ಯಕತೆ ಕುರಿತು ಪರಿಚಯಾತ್ಮಕ ಲೇಖನದ ಜೊತೆಗೆ ಕಳೆದ ಸಂಚಿಕೆಯಲ್ಲಿನ ಇಂದುಮತಿ ತಾಯಿಯವರ "ಭಾರತೀಯ ಶಿಕ್ಷಣ" ಪುಸ್ತಕದ ಅನುವಾದ ಲೇಖನವು ಮುಂದುವರಿದಿರುವುದನ್ನು ಅಧ್ಯಯನಾಸಕ್ತರು ಸವಿಯಬಹುದಾಗಿದೆ.

ಪೂರ್ಣಪ್ರಮತಿಗೆ ಭೇಟಿಕೊಟ್ಟ ಅನೇಕ ವಿದ್ವಾಂಸರು, ಚಿಂತಕರು ಹಾಗೂ ಶಿಕ್ಷಣ ತಜ್ಞರಲ್ಲಿ ಒಬ್ಬರಾದ ರೋಹಿತ್ ಶರ್ಮಾ ಪೂರ್ಣಪ್ರಮತಿಯ ಜೊತೆಗಿನ ತಮ್ಮ ಅನುಭವವನ್ನು ಇಲ್ಲಿ ಹಂಚಿಕೊಂಡಿದ್ದಾರೆ.



# ಪರಿವಿಡಿ


| | |
|---|---|
| ರಾಮರಾಜ್ಯದ ಕನಸಿಗೆ ವೇದಿಕೆಯಾಗಿ ಪೂರ್ಣಪ್ರಮತಿ | ಲತಾ ಎಂ. |
| We will conserve only what we love | Raghuram |
| ಸಂಪೂರ್ಣ ಭಾರತೀಯ ಶಿಕ್ಷಣದೆಡೆಗೆ ನಮ್ಮ ಪ್ರಯತ್ನಗಳು | ನವೀನ್ ಕಲ್ಲುಂಡಿ |
| Unveiling Pūrṇapramati | Rohit Sharma |
| ಕನ್ನಡ ಪದಬಂಧ | ಭಾಗ್ಯಶ್ರೀ |

## ಉತ್ಸವ ಯೋಜನೆ - ಮೊದಲ ಹೆಜ್ಜೆ

ಲತಾ ಎಂ.
ಪ್ರಶಿಕ್ಷಣ ತಂಡ, ಪೂರ್ಣಪ್ರಮತಿ

ಮೋಕ್ಷಸಾಧನೆಗಾಗಿ ಇರುವ ಕರ್ಮಭೂಮಿ ನಮ್ಮ ಭಾರತ. ಕೇವಲ ಭೋಗ ನಮ್ಮ ಸಂಸ್ಕಾರವಲ್ಲ. ಧರ್ಮಕ್ಕೆ ಸಂಕಟ ಬಂದಾಗ ಕೈ ಕಟ್ಟಿ ಕೂರುವ ಜಾಯಮಾನದವರೂ ನಾವಲ್ಲ. ಭಾರತೀಯರ ಲಕ್ಷಣವೇ ಜ್ಞಾನ ಸಂಪಾದನೆ ಮತ್ತು ಧರ್ಮರಕ್ಷಣೆ. ಎಲ್ಲವನ್ನೂ ತಾಳ-ಮೇಳ ಸೇರಿದ ಒಂದು ಸುಂದರ ಗಾನದಂತೆ ಮಾಡುವ ಶಕ್ತಿ ಧರ್ಮರಕ್ಷಣೆಯಲ್ಲೇ ಅಡಗಿದೆ. ಹಾಗಾಗಿಯೇ ಅನೇಕ ರಾಜವಂಶಗಳು, ಋಷಿ-ಮುನಿಗಳು, ಕುಲಗಳು ಈ ಧರ್ಮರಕ್ಷಣೆಯನ್ನು ತಮ್ಮ ಕರ್ತವ್ಯವಾಗಿಸಿಕೊಂಡು ತನು-ಮನ-ಧನವನ್ನು ಅರ್ಪಿಸುತ್ತಾ ಹಲವು ಕಾಲ ಸಂದಿದೆ. ಇವುಗಳನ್ನೇ ನಾವು ಪರಂಪರೆಯ ರೂಪದಲ್ಲಿ ಇಂದಿಗೂ ಕಾಪಾಡಿಕೊಳ್ಳುವ ಮನಸ್ಥಿತಿಯನ್ನು ಹೊಂದಿರ್ದ್ದೇವೆ. ಗುರು-ಶಿಷ್ಯ ಪರಂಪರೆ, ಪುತ್ರ-ಪೌತ್ರ ಪರಂಪರೆ, ನದಿ ಪರಂಪರೆ, ಪರ್ವತ ಪರಂಪರೆ, ಕಾಡಿನ ಪರಂಪರೆ, ಭಾಷಾ ಪರಂಪರೆ ಹೀಗೆ ಇನ್ನೂ ಅನೇಕ.

ಧರ್ಮವು ಸಹಜವಾಗಿ ನೆಲೆಸಿದ್ದ ಕಾಲ ಕೃತಯುಗ. ತ್ರೇತಾಯುಗದಲ್ಲಿ ಅದನ್ನು ರಕ್ಷಿಸಿಕೊಳ್ಳುವ ಹಂತಕ್ಕೆ ತಲುಪಿತು. ದ್ವಾಪರಯುಗದಲ್ಲಿ ಅದಕ್ಕಾಗಿ ಯುದ್ಧವೊಂದೇ ದಾರಿ ಎಂದಾಯಿತು. ಕಲಿಯುಗದಲ್ಲಿ ದೇವರ ಮೊರೆಹೋಗುವುದೊಂದೇ ಉಪಾಯವಾಗಿದೆ. ಧರ್ಮ ಸಹಜವಾಗಿ ಇದ್ದಾಗ ಲೋಕ ಹೇಗಿರುವುದು ಎನ್ನುವ ಕಲ್ಪನೆ ಈಗ ಸಿಗುವುದೂ ಕಷ್ಟ. ಆದರೆ ಒಂದು ನಮೂನೆಯನ್ನು ಮಾರ್ಗದರ್ಶನಕ್ಕಾಗಿ ಆದಿಕವಿ ವಾಲ್ಮೀಕಿಗಳು ರಾಮಾಯಣದಲ್ಲಿ ಉಲ್ಲೇಖಿಸಿದ್ದಾರೆ (ಬಾಲಕಾಂಡೆ ಪ್ರಥಮಃ ಸರ್ಗಃ)

प्रहृष्टमुदितो लोकस्तुष्टः पुष्टः सुधार्मिकः ।

निरामयो ह्यरोगश्च दुर्भिक्षभयवर्जितः ॥

न पुत्रमरणं केचिद् द्रक्ष्यन्ति पुरुषाः क्वचित् ।

नार्यश्चाविधवा नित्यं भविष्यन्ति पतिव्रताः ॥

न चाग्निजं भयं किंचिन्नाप्सु मज्जन्ति जन्तवः ।

न वातजं भयं किंचिन्नापु ज्वरकृतं तथा ॥

न चापि क्षुद्भयं तत्र न तस्करभयं तथा ।

नगराणि च राष्ट्राणि धनधान्ययुतानि च ॥

नित्यं प्रमुदिताः सर्वे यथा कृतयुगे तथा ।

अश्वमेधशतैरिष्ट्वा तथा बहुसुवर्णकैः ॥

गवां कोट्ययुतं दत्वा विद्वद्भ्यो विधिपूर्वकम् ।

असंख्येयं धनं दत्वा ब्राह्मणेभ्यो महायशाः ॥

राजवंशाञ्छतगुणान् स्थापयिष्यति राघवः ।

चातुर्वर्ण्यं च लोकेऽस्मिन् स्वे स्वे धर्मे नियोक्ष्यति ॥

ಧರ್ಮದ ಮೂರ್ತರೂಪವೆಂದರೆ ಅದುವೇ ಶ್ರೀರಾಮಚಂದ್ರ ಎಂಬುದು ಈ ಶ್ಲೋಕಗಳಿಂದ ಸೂಚನೆ ಸಿಗುವುದು. ಆದರ್ಶ ಧರ್ಮರಾಜ್ಯವೆಂದರೆ ಅದುವೇ ರಾಮರಾಜ್ಯ. ಇಂತಹ ರಾಮನಿದ್ದ ಭೂಮಿ ನಮ್ಮ ಭಾರತ. ಈ ಶ್ಲೋಕಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಮೇಲೆ ಉಲ್ಲೇಖ ಮಾಡಿದ ಎಲ್ಲಾ ಪರಂಪರೆಗಳು ರಕ್ಷಿತವಾಗಿದ್ದರೆ ಮಾತ್ರ ಇಂತಹ ಸಾಮ್ರಾಜ್ಯ ಕಟ್ಟಲು ಸಾಧ್ಯ ಎಂಬುದು ಸಿದ್ಧ.

ಈ ರಾಮರಾಜ್ಯಕ್ಕೆ ಹೋಲಿಸಿಕೊಂಡರೆ ಇಂದಿನ ಪರಿಸ್ಥಿತಿಯನ್ನು ಒಮ್ಮೆ ತಾಳೆ ಹಾಕಿ ನೋಡಿ.... ನಮ್ಮ ಕಣ್ಮುಂದೆ ಬಂದು ನಿಲ್ಲುವ ಸವಾಲುಗಳೇನು? ಒತ್ತಡಯುಕ್ತ ಬದುಕು, ಏಕಾಂಗಿತನ, ವಿಷಯುಕ್ತ ಆಹಾರ, ಜಲ-ನೆಲ-ವಾಯು ಮಾಲಿನ್ಯ, ಸಾಂಕ್ರಾಮಿಕ ರೋಗಗಳು, ಅಕಾಲಿಕ ಮಳೆ, ಭೂಕಂಪ, ಸುನಾಮಿ ಇತ್ಯಾದಿ ಪ್ರಾಕೃತಿಕ ವಿಕೋಪಗಳು, ತಂತ್ರಜ್ಞಾನದ ದುರುಪಯೋಗ, ಯುದ್ಧ ಇತ್ಯಾದಿ....

ರಾಮರಾಜ್ಯದ ಸಿದ್ಧ ಉತ್ತರಗಳನ್ನು ಇಟ್ಟುಕೊಂಡು ಅಧಃಪತನಕ್ಕೆ ಸಾಗುತ್ತಿರುವ ನಮ್ಮ ಸಮಾಜವನ್ನು ಪರಂಪರೆಗಳನ್ನು ರಕ್ಷಿಸಿಕೊಳ್ಳಲು ಸಾಧ್ಯವೇ? ನಿಮ್ಮ ಹುಡುಕಾಟವೂ ಇದೇ ಆಗಿದ್ದಲ್ಲಿ ಪೂರ್ಣಪ್ರಮತಿ ನಿಮಗೆ ಒಂದು ವೇದಿಕೆಯಾಗಲಿದೆ.

ಪೂರ್ಣಪ್ರಮತಿ ಒಂದು ಕಲಿಕಾ ಸಮುದಾಯ. ಸಮಾನ ಮನಸ್ಕರನ್ನು ಸಂಯೋಜಿಸುವ ಒಂದು ವೇದಿಕೆ. ಭಾರತೀಯ ಸಂಸ್ಕೃತಿಯ ಬಗ್ಗೆ, ಅಲ್ಲಿನ ನಡಿಗೆಗಳ ಬಗ್ಗೆ, ಚಿಂತನೆಗಳ ಬಗ್ಗೆ, ಪರಂಪರೆಗಳ ಬಗ್ಗೆ ಆಳವಾಗಿ ಅಭ್ಯಸಿಸಲು ಮತ್ತು ಅಭ್ಯಸ್ತರು ಹಾಗೆ ಬದುಕಲು ಒಂದು ಹೊಸ ಸಮುದಾಯವನ್ನು ಕಟ್ಟುವುದಕ್ಕಾಗಿ ನಡೆಯುತ್ತಿರುವ ಪ್ರಯತ್ನ.

ಈ ನಿಟ್ಟಿನಲ್ಲಿ ೨೦೨೩-೨೪ ರ ವೇಳೆಗೆ ಭಾರತೀಯರಿಗೆ ಸಿಕ್ಕಿರುವ ದೊಡ್ಡ ಗೆಲುವೆಂದರೆ ಅಯೋಧ್ಯೆಯಲ್ಲಿ ಅವಿರೋಧವಾಗಿ ರಾಮಮಂದಿರದ ಸ್ಥಾಪನೆಯಾಗುತ್ತಿರುವುದು. ಶತಮಾನದ ಸಂತರಾದ, ದೂರದರ್ಶಿಗಳಾದ ಶ್ರೀ ವಿಶ್ವೇಶತೀರ್ಥರು ನೀಡಿರುವ ಘೋಷಣೆ "ರಾಮಮಂದಿರದಿಂದ ರಾಮರಾಜ್ಯದೆಡೆಗೆ". ಪ್ರತಿಯೊಬ್ಬರೂ ರಾಮನ ಗುಣಗಳನ್ನು ಅಳವಡಿಸಿಕೊಳ್ಳುವ ವೈಯಕ್ತಿಕ ನೆಲೆಯಿಂದ ಆರಂಭಿಸಿ ತನ್ನ ಕುಟುಂಬ, ಗ್ರಾಮ, ದೇಶ ಹೀಗೆ ಪರಂಪರಾ ರಕ್ಷಣೆಯ ಕರ್ತವ್ಯವನ್ನು ವಿಸ್ತರಿಸುವ ಯೋಜನೆಯನ್ನು ಹೊಂದಲಾಗಿದೆ. ತಮ್ಮದೇ ಕಲ್ಪನೆ, ಸಾಮರ್ಥ್ಯ, ಪ್ರತಿಭೆಯೊಂದಿಗೆ ರಾಮರಾಜ್ಯವನ್ನು ಸಾಕಾರಗೊಳಿಸುವ ಮುಕ್ತ ವೇದಿಕೆಯನ್ನು ಪೂರ್ಣಪ್ರಮತಿಯು ಸೃಷ್ಟಿಸಲಿದೆ. ಈ ಬಾರಿಯ ಪೂರ್ಣಪ್ರಮತಿ ಉತ್ಸವದ ಯೋಜನೆ ಒಬ್ಬ ವಿದ್ಯಾರ್ಥಿಯ ಭಾಗವಹಿಸುವಿಕೆಯಿಂದ ಆರಂಭಿಸಿ ಸಮಾಜದ ಕಾರ್ಯಸಾಧಕರವರೆಗೆ ಮುಟ್ಟುವಂತೆ ಮುಂದಿನ ಎಲ್ಲಾ ವರ್ಷಗಳಿಗೆ ಭದ್ರ ಕಾರ್ಯಯೋಜನೆ ಆಗುವಂತೆ ರೂಪಿಸಲಾಗಿದೆ.

ಈ ಪರಿಕಲ್ಪನೆಯನ್ನು ಓದಿದ ನಂತರ ಈ ನಿಟ್ಟಿನಲ್ಲಿ ನಿಮ್ಮದೇ ಆದ ಕಲ್ಪನೆಗಳಿದ್ದಲ್ಲಿ ನಮ್ಮೊಂದಿಗೆ ಹಂಚಿಕೊಳ್ಳಿ.

96634 74669 / 72590 40610

info@purnapramati.in www.purnapramati.in

# We will conserve only what we love


Raghuram

Student

Higher Studies


We will conserve only what we love; we will love only what we understand and we will understand only what we are taught - Baba Dioum

The above saying, I believe can be achieved through environmental education. It prepares students for active participation in dealing with environmental issues. The goal of environmental education is to develop a world population that is aware of, and concerned about, the environment and its associated problems, and which has the knowledge, skills, attitudes, motivations, and commitment to work individually and collectively toward solutions of current problems and the prevention of new ones.(Belgrade Charter, UN)

An environmentally literate person is someone who, individually and together with others, makes informed decisions concerning the environment; is willing to act on these decisions to improve the well-being of other individuals, societies, and the global environment; and participates in civic life. Environmentally literate individuals possess the knowledge and understanding of a wide range of environmental concepts, problems, and issues; along with the cognitive capacities and abilities as well as dispositions and values that enable environmentally responsible behavioral strategies to apply such knowledge and understanding in order to make sound and effective decisions on a range of environmental contexts. It requires going beyond fragmented thinking about the environment and thinking in terms of interaction of human and natural systems. The production of environmentally literate citizens through formal education will enable the knowledge, cognitive capacities, and attitudes acquired in the classroom, to be transferred to the decision-making process of students throughout their lives. ( NCF-2023).

Efforts to increase environmental literacy have been made throughout the world. Globally, the United Nations declared the decade 2005-2014 as the decade of education for sustainable development. Locally, here in India too, based on a PIL filed by P.C. Mehta in 1991, the honourable Supreme court verdict of 1991 and a subsequent addendum in 2003 made it compulsory to introduce EE in schools. Following this, NCERT added EE as a compulsory subject and made the following changes as per NCF-2005:-

1. Classes I and II (ages 6-7)

EE is taught through activities integrated into the core subjects of reading, writing, and mathematics. For example, students may study shapes in mathematics by identifying shapes in the natural environment.

2. Classes III to V (ages 8-11):

EE is taught as a standalone subject, called Environmental Studies (EVS), with a textbook called My Environment that aims for students to learn about the environment in the context of their own lives and communities.

3. Classes VI to X (ages 12-16):

EE is taught by the infusion approach primarily in science and social sciences. For example, students studying decomposition in science might complete an EE-related project as part of the learning unit. In all subjects, EE-based questions comprise ten percent of the total marks for both formative and summative assessments.

4. Classes XI and XII (ages 17-18):

EE is part of students' Interdisciplinary Projects in electives and General Studies as students choose their own disciplines. These classes focus on project based learning. For example, a student studying commerce might complete a project that focuses on the concept of green economy.

NCERT also published project books for students of Classes VI to X (Age 12 to 16 years) for use as part of the project-based learning infusion approach. The goal of the project books is to build capacity for critical and multidisciplinary thinking, as well as to develop a positive and problem-solving attitude among students. The projects were also encouraged through Jawaharlal Nehru National Science, Mathematics, and Environment Exhibition (JNNSMEE) for Children, an organization that aims to develop critical thinking about global issues to maintain healthy and sustainable societies in today's environment.

Now more recently as part of NCF-2023 a lot of focus has been laid on EE and proposed many changes. It recognises 4 different stages of development of a child. Foundation, Preparatory, Middle and Secondary. Here are some broad level changes that are mentioned in NCF-2023:-

Preparatory Stage

- World around us, introduced as an interdisciplinary area, uses the natural curiosity and creativity of students to move towards developing an understanding of their environment

Middle Stage

- Integration of Environmental Education with Science and Social Science

Secondary Stage

- Grade 9 - Integration of Environmental Education mainly with Social Science
- Grade 10 - Environmental education as a separate subject
- Grade 11 and 12, as an elective
- Environmental philosophy
- biodiversity and biogeography of India
- Grade 11 and 12. as interdisciplinary curriculum
- sustainability and climate change

While the NCF-2023 tries to address issues that had plagued EE in India, it remains to be seen how much of it will be implemented. Earlier directives on EE are yet to be implemented in the

true spirit. It has been found that there is always a gap in policies and its implementation. While the intentions of the policy makers are always in the right spirit, due to lack of resources and training at the ground level, implementation becomes a challenge. NCF-2023 does recognise this fact and lays importance on teacher pre-service and in-service training. While there has been past research done to identify these problems and even recommend solutions, ground realities suggest that teacher educators or teachers are not equipped with enough ammunition to deal with the issue

Given all this focus on EE, it is important to conduct deeper research on EE, with focus on current status and recommendations to bridge the gaps

References:-


- NCF-2005
- NCF-2023
- UN Report on decade of sustainable development
- Belgrade Charter (UN)

# ಸಂಪೂರ್ಣ ಭಾರತೀಯ ಶಿಕ್ಷಣದ ಕಡೆಗೆ ನಮ್ಮ ಪ್ರಯತ್ನಗಳು - ೨

ಕಲ್ಲುಗುಂಡಿ ನವೀನ್
ಅನುವಾದಕರು
ಪ್ರಕಾಶನ ತಂಡ, ಪೂರ್ಣಪ್ರಮತಿ
20-09-2023

**ಶ್ರೀಮತಿ ಇಂದುತಾಯಿ ಇವರ ಮರಾಠೀ ಮೂಲ ಗ್ರಂಥದ ಕನ್ನಡ ಅನುವಾದ.**

ಕಳೆದಬಾರಿ ಸಂಪೂರ್ಣವಾಗಿ ಭಾರತೀಯ ಶಿಕ್ಷಣದ ಕಡೆಗೆ ಹೋಗುವ ನಮ್ಮ (ಪೂರ್ಣಪ್ರಮತಿಯ) ಪ್ರಯತ್ನಗಳನ್ನು ಕುರಿತಾಗಿ ಅರಿತಿದ್ದೆವು. ಭಾರತೀಯ ಶಿಕ್ಷಾ ಗ್ರಂಥದ ಚೌಕಟ್ಟನ್ನು ಸ್ಥೂಲವಾಗಿ ಪರಿಚಯ ಮಾಡಿಕೊಂಡಿದ್ದೆವು. ಈ ಬಾರಿ ಒಂದು ಬಹಳ ಮುಖ್ಯವಾದ ಭಾಗದ ಅನುವಾದವನ್ನೇ ನೋಡೋಣ.

## ಗರ್ಭಕ್ಕೆ ಜೀವದ ಪ್ರವೇಶ

ಅಧ್ಯಾಯ ೧೯

**ಶಿಶುವು ತನ್ನ ತಂದೆತಾಯಿಗಳನ್ನು ಆರಿಸಿಕೊಳ್ಳುತ್ತದೆ**

ಜೀವನ ಕುರಿತಾಗಿ ಮಾತನಾಡುತ್ತಿರುವಾಗ ಒಂದು ವಿಷಯದ ಬಗ್ಗೆ ಮಾತು ಬಂದಾಗ ಪುರುಷಾರ್ಥ ಕುರಿತಾಗಿ ಎಷ್ಟೇ ಮಾತಾಡಿದರೂ ಹೇಳಿದರೂ ಅನೇಕ ವಿಷಯಗಳು ಮನುಷ್ಯನ ಕೈಲಿಲ್ಲ ಎಂಬ ಹಂತಕ್ಕೆ ಬಂದು ತಲಪುತ್ತೇವೆ. ಅಂತಹ ಸಂದರ್ಭದಲ್ಲಿ ಒಂದು ಮಾತನ್ನು ಉದಾಹರಣೆಯಾಗಿ ಹೇಳಲಾಗುತ್ತದೆ. ಅದೆಂದರೆ ವ್ಯಕ್ತಿಯು ತನ್ನ ತಂದೆತಾಯಿಗಳನ್ನು ಆರಿಸಿಕೊಳ್ಳಲು ಸಾಧ್ಯವಿಲ್ಲ (One cannot choose his parents) ಎಂದು. ಯಾರೂ ತಮ್ಮ ತಂದೆತಾಯಿಗಳನ್ನು ಆರಿಸಿಕೊಳ್ಳಲು ಸಾಧ್ಯವಿಲ್ಲ. ಅಂದರೆ, ಯಾರ ಮನೆಯಲ್ಲಿ ಜನ್ಮತಾಳುತ್ತಾನೆ ಎಂಬುದು ಜನ್ಮತಾಳುವವನ ಕೈಲಿ ಇರುವುದಿಲ್ಲ ಎಂಬುದು.

ಮೇಲ್ನೋಟಕ್ಕೆ ಇದು ಸರಿ ಎಂದೂ ಅನಿಸಿಬಿಡುತ್ತದೆ. ತಾರ್ಕಿಕವೂ ಎನಿಸುತ್ತದೆ. ಹೇಗೆ ಬಾಲಕ ತನಗೆ ಬೇಕಾದ ಬಟ್ಟೆ, ಆಟಿಕೆಯನ್ನು ಆರಿಸಿಕೊಳ್ಳುತ್ತಾನೋ, ಹೇಗೆ ಏನನ್ನು ಓದಬೇಕು, ಯಾವ ಕೆಲಸಕ್ಕೆ ಸೇರಬೇಕು ಎಂಬುದನ್ನು ಅವನೇ ನಿಶ್ಚಯ ಮಾಡುತ್ತಾನೋ, ಕೊನೆಗೆ ಯಾರನ್ನು ಮದುವೆಯಾಗಬೇಕು? ಯಾವಾಗ ಮದುವೆಯಾಗಬೇಕು? ಮಕ್ಕಳು ಬೇಕೆ? ಬೇಡವೇ? ಬೇಕು ಎಂದರೆ ಯಾವಾಗ ಬೇಕು? ಯಾವಾಗ ಬೇಡ? ಎಷ್ಟು ಮಕ್ಕಳು ಎಂಬುದೆಲ್ಲವನ್ನೂ ಮನುಷ್ಯ ನಿರ್ಧರಿಸಬಹುದು. ಅದು ಅವನ ಕೈಲಿದೆ, ಆದರೆ ತಾನು ಯಾರ ಮನೆಯಲ್ಲಿ ಹುಟ್ಟುತ್ತೇನೆ, ಯಾರು ನನ್ನ ತಂದೆತಾಯಿಗಳು ಎಂಬುದನ್ನು ಅವನು ನಿರ್ಧರಿಸಲು ಸಾಧ್ಯವಿಲ್ಲ. ಆ ತಂದೆತಾಯಿಗಳು ಜನ್ಮತಳೆದು ಆಗಿದೆ ಹಾಗೂ ಅವರು ಈಗ ಮಗುವಿಗೆ ಜನ್ಮಕೊಡಲಿದ್ದಾರೆ. ತಾನು ಹುಟ್ಟುವ ಮೊದಲೇ ಆಗಿರುವ ಘಟನೆಯನ್ನು ಅವನು ಹೇಗೆ ತಾನೇ ನಿಯಂತ್ರಿಸಲು ಸಾಧ್ಯ?

ಆದ್ದರಿಂದ ತಂದೆತಾಯಿಗಳು ಹೇಗಿದ್ದಾರೋ ಹಾಗೆ ಸ್ವೀಕರಿಸಬೇಕಾಗುತ್ತದೆ. ಸಂಯೋಗದಿಂದ ಹೇಗೆ ಲಭ್ಯವೋ ಹಾಗೆಯೇ ಸರಿ! ಯಾರೇನು ಮಾಡಲು ಸಾಧ್ಯ?

ಆದರೆ, ನಮ್ಮ ಶಾಸ್ತ್ರಗಳು, ಪುರಾಣಗಳು ಮತ್ತು ನಮ್ಮ ಇತಿಹಾಸದಲ್ಲಿ ಸಿಕ್ಕ ಉದಾಹರಣೆಗಳು ಬಹಳ ಸ್ಪಷ್ಟವಾಗಿ ಮತ್ತು ಅತ್ಯಂತ ಬುದ್ಧಿಪೂರ್ವಕವಾಗಿ ಬೋಧಿಸುವುದೆಂದರೆ ತಂದೆತಾಯಿಗಳು ಲಭ್ಯರಾಗುವುದು ಕೇವಲ ಯೋಗಾಯೋಗವಲ್ಲ, ಅದಕ್ಕೆ ಕೇವಲ ಪರಿಸ್ಥಿತಿ ಕಾರಣವಲ್ಲ, ಅಲ್ಲಿ ಒಂದು ದೀರ್ಘ ಘಟನಾವಳಿಗಳ ಪರಂಪರೆಯೇ ನಡೆದ ಪರಿಣಾಮ ಖಂಡಿತವಾಗಿ ಇದೆ, ಆದರೆ, ಅದರ ಸೂತ್ರ ಪೂರ್ಣವಾಗಿ ಜನ್ಮತಾಳುವ ವ್ಯಕ್ತಿಯ ಕೈಯಲ್ಲಿಯೇ ಇರುತ್ತದೆ. ಇಲ್ಲಿ ನಾವು ಆ ಘಟನಾ ಪರಂಪರೆಯನ್ನು ಸರಳವಾಗಿ ಅರಿಯುವ ಪ್ರಯತ್ನವನ್ನು ಮಾಡೋಣ.

## ಜನ್ಮ-ಜನ್ಮಾಂತರ ಹಾಗೂ ಪುನರ್‌ಜನ್ಮ

ಭಾರತೀಯ ಜೀವನದರ್ಶನವೆಂದು ಕರೆಯಲಾಗುವ ಹಿಂದೂ ಜೀವನದರ್ಶನ ಪುನರ್‌ಜನ್ಮ ಸಿದ್ಧಾಂತವನ್ನು ಒಪ್ಪುತ್ತದೆ. ನಾವು ಇಲ್ಲಿ ಯಾವೊಂದು ಜೀವನದರ್ಶನವನ್ನು ಮತ್ತೊಂದರ ಜೊತೆಗೆ ಹೋಲಿಸುತ್ತಿಲ್ಲವಾದರೂ ಹೀಗೆ ಜನ್ಮಜನ್ಮಾಂತರದ ಸಿದ್ಧಾಂತವನ್ನು ಒಪ್ಪದ ಜೀವನದರ್ಶನಗಳು ಇವೆ ಎಂಬುದನ್ನು ಒಪ್ಪೋಣ.  ಅವು ಮನುಷ್ಯ ಜೀವನವು ವರ್ತಮಾನದ ಜನ್ಮ ಕಳೆಯುವುದರೊಂದಿಗೇ ಪೂರ್ಣವಾಗಿ ಹೋಗುತ್ತದೆ ಹಾಗೂ ಆ ಮನುಷ್ಯನು ಮತ್ತೆ ಜನ್ಮತಾಳುವುದಿಲ್ಲ ಎಂದು ನಂಬುತ್ತವೆ.  ಆದರೆ ಒಬ್ಬ ತೀರಾಸಾಮಾನ್ಯ ಹಿಂದೂವಿಗೆ ಹೀಗೆ ಪುನರ್‌ಜನ್ಮವಿಲ್ಲ ಎಂದು ನಂಬುವ ಜೀವನದರ್ಶನವಿದೆ ಎಂದು ನಂಬಲೂ ಸಾಧ್ಯವಿಲ್ಲ. ಆದ್ದರಿಂದಲೇ ಸಮಗ್ರ ಜೀವನದ ರಚನೆಯನ್ನು ಇದೇ ಸಿದ್ಧಾಂತದ ಅನ್ವಯ ಸ್ವೀಕರಿಸುತ್ತಾರೆ. ಹಾಗಾಗಿ ನಮ್ಮಲ್ಲಿ "ಎಲ್ಲೋ ಹಿಂದಿನ ಜನ್ಮದಲ್ಲಿ ಒಳ್ಳೆ ಹೂ ಪೂಜೆ ಮಾಡಿದ್ದಳು, ಒಳ್ಳೆಯ ಗಂಡ ಸಿಕ್ಕಿದ", "ಪೂರ್ವಜನ್ಮದ ಪುಣ್ಯ ಹಾಗಾಗಿ ಇಂತಹ ಒಳ್ಳೆಯ ಮನೆಯಲ್ಲಿ ಹುಟ್ಟಿದ...", "..ಇವೆಲ್ಲ ಹಿಂದಿನ ಜನ್ಮದಲ್ಲಿ ಮಾಡಿದ ಪಾಪದ ಫಲ ರೀ" ಇತ್ಯಾದಿ ಮಾತುಗಳು ಜನಪದರಲ್ಲಿ ಕೇಳಿಬರುತ್ತವೆ.

ಒಂದರನಂತರ ಮತ್ತೊಂದು ಜನ್ಮಗಳನ್ನು ನಾವು ತಳೆಯುತ್ತಾ ಹೋಗುತ್ತೇವೆ. ಜನನ ಮರಣಗಳ ಚಕ್ರ ಸುತ್ತುತ್ತಲೇ ಇರುತ್ತದೆ. ಇದರ ಅಂತ್ಯವಾಗುವುದು ಅನೇಕ ಬಗೆಗಳ ತಪಸ್ಸಿನಿಂದ ಮಾತ್ರ. ಈ ಅಂತ್ಯವನ್ನೇ ಮೋಕ್ಷ ಎನ್ನುವುದು. ಹೀಗೆ ಬರುವ ಅನೇಕ ಜನ್ಮಗಳಲ್ಲಿ ವ್ಯಕ್ತಿಗೆ ಬೇರೆ ಬೇರೆ ಶರೀರಗಳು ಲಭಿಸುತವೆ. ಹಾಗೆ ಲಭಿಸುವ ಶರೀರವು ಮನುಷ್ಯನದ್ದೂ ಆಗಿರಬಹುದು ಇಲ್ಲವೇ ಪ್ರಾಣಿಗಳದ್ದೂ ಆಗಿರಬಹುದು. ಇದಕ್ಕೆ ನಮ್ಮ ಶಾಸ್ತ್ರಗಳಲ್ಲಿ ಹಾಗೂ ಜನಪದದಲ್ಲಿ ಅನೇಕ ಉದಾಹರಣೆಗಳು ದೊರೆಯುತ್ತವೆ.

ಜಡಭರತ ಮುನಿಯು ಮೃಗವಾಗಿ ಹುಟ್ಟಿದ್ದನ್ನು, ಬಲರಾಮ ಹಿಂದಿನ ಜನ್ಮದಲ್ಲಿ ಶೇಷನಾಗನಾಗಿದ್ದದ್ದನ್ನು ಸ್ಮರಿಸಬಹುದು. ಇಂತಹ ಅನೇಕ ಉದಾಹರಣೆಗಳು ಪುರಾಣಗಳಲ್ಲಿ ಲಭ್ಯವಾಗುತ್ತವೆ. ಲೋಕವ್ಯವಹಾರದಲ್ಲಿ ನಾವು ಆಗಾಗ್ಗೆ ಕೇಳುವಂತಹ ಮಾತುಗಳನ್ನು ಇಲ್ಲಿ ಸ್ಮರಿಸಬಹುದು:

**“ಇಷ್ಟು ಸೋಮಾರಿಯಾದರೆ ಇವನು ಮುಂದಿನ ಜನ್ಮದಲ್ಲಿ ಹೆಬ್ಬಾವೇ ಆಗೋದು".**

**"ಬಕಾಸುರನಂತೆ ತಿಂತೀಯಲ್ಲ, ಹೋದ ಜನ್ಮದಲ್ಲಿ ನಾಯಿಯಾಗಿ ಹುಟ್ಟಿರಬೇಕು.**

ಮನುಷ್ಯ ಅಥವಾ ಪ್ರಾಣಿಗಳ ಯೋನಿಯಲ್ಲಿ ನಿರಂತರವಾಗಿ ಹುಟ್ಟುತ್ತಲೇ ಇರುತ್ತೇವೆ. ಈ ಎಲ್ಲ ಜನ್ಮಗಳಲ್ಲಿನ ಜೀವ ಒಂದೇ ಆಗಿರುತ್ತದೆ. ಆದ್ದರಿಂದ ಜೀವನವೂ ನಿರಂತರವಾಗಿ ಒಂದೇ ಆಗಿರುತ್ತದೆ. ಈ ಮೂಲ ಸಿದ್ಧಾಂತವನ್ನು ಒಪ್ಪಿಕೊಂಡಿದ್ದರಿಂದಾಗಿ ಪಾಪ-ಪುಣ್ಯ, ಸ್ವರ್ಗ-ನರಕ, ಬಂಧನ-ಮೋಕ್ಷ ಇತ್ಯಾದಿಗಳ ವರ್ಣನೆ ಬಂದಿದೆ. ಇಲ್ಲಿ ನಾವು ಈ ಕುರಿತಾಗಿ ಹೆಚ್ಚು ಚರ್ಚಿಸದೇ, ಕೇವಲ ಪೂರ್ವಜನ್ಮ ಹಾಗೂ ಪುನರ್‌ಜನ್ಮದ ಸಿದ್ಧಾಂತ ಮಾತ್ರವೇ ಸಿಂಧುವಾಗುತ್ತದೆ ಎಂದು ಒಪ್ಪಿಕೊಂಡು ಮುಂದುವರೆಯೋಣ.

## ಕರ್ಮಫಲ ಮತ್ತು ಪುನರ್‌ಜನ್ಮ

ಪುನರ್‌ಜನ್ಮ ಯಾವುದಾಗುತ್ತದೆ, ಎಲ್ಲಾಗುತ್ತದೆ, ಆಯಸ್ಸು ಎಷ್ಟಿರುತ್ತದೆ, ಹೇಗಿರುತ್ತದೆ ಈ ಎಲ್ಲವೂ ಯಾವ ಆಧಾರದ ಮೇಲೆ ತೀರ್ಮಾನವಾಗುತ್ತದೆ? ಈ ಬೇರೆ ಬೇರೆ ಜನ್ಮಗಳು ಸುಮ್ಮನೇ ಆಗಿ ಹೋಗುತ್ತವೆಯೇ? ಇಲ್ಲ. ಈ ಸಮಸ್ತ ಬ್ರಹ್ಮಾಂಡದಲ್ಲಿ ಅವ್ಯವಸ್ಥೆ ಎಂಬುದು ಸ್ವಲ್ಪವೂ ಇರುವುದಿಲ್ಲ. ತೀರಾ ಸಣ್ಣದು ಎನಿಸಿಕೊಳ್ಳಬಹುದಾದ ಘಟನೆಯೂ ನಿಯಮವಿಲ್ಲದೆ ನಡೆಯುವುದಿಲ್ಲ. ಪ್ರತಿಯೊಂದೂ ಪೂರ್ವನಿರ್ಧಾರಿತವಾಗಿಯೇ ಜರುಗುತ್ತದೆ. ಹೀಗಿರುವಾಗ ಜೀವಿಗೆ ಮನುಷ್ಯನಿಗೆ ಯಾವ ಜನ್ಮ ಬರಬೇಕು ಎಂಬುದು ಅನಿಶ್ಚಿತವಾಗಿರಲು ಸಾಧ್ಯವೇ ಇಲ್ಲ. ಹಾಗಾದರೆ ಇದೇನು ಭಗವಂತನ ಇಚ್ಛಾನುಸಾರ ನಡೆಯುತ್ತದೆಯೇ? ಹಾಗೆ ಭಗವಂತನ ಇಚ್ಛೆಯಂತೆ ಆಗುತ್ತಿದೆ ಎನ್ನುವುದಾದರೆ ಆ ಭಗವಂತನು ಯಾರು? ಹೇಗಿದ್ದರೂ ಹಿಂದೂಗಳಿಗೆ ದೇವರ ಅಸ್ತಿತ್ವವನ್ನು ಕುರಿತಾಗಿ ಸಂದೇಹವಿರಲು ಸಾಧ್ಯವಿಲ್ಲ. ಅವರು ಭಗವಂತ ಸರ್ವಶಕ್ತನೂ, ಸರ್ವಜ್ಞನೂ, ಸರ್ವವ್ಯಾಪಿಯೂ, ಆದಿಅಂತ್ಯವಿಲ್ಲದವನೂ ಜಗತ್ತಿನ ನಿಯಂತ್ರಕನೂ ಹೌದೆಂದು ಸ್ವೀಕರಿಸಿ ನಡೆಯುತ್ತಾರೆ. ನಿಜ, "ನನಗೆ ದೇವರಲ್ಲಿ ನಂಬಿಕೆಯಿಲ್ಲ", "ನನಗೆ ಪುನಜನ್ಮದಲ್ಲಿ ನಂಬಿಕೆಯಿಲ್ಲ" ಎಂದು ಹೇಳುವವರು ಸಿಗಬಹುದು. ಇವರ ಹಿನ್ನೆಲೆಯನ್ನು ನಾವು ಹುಡುಕಿ ನೋಡಿದರೆ ಇವರು ಮೂಢರೋ, ಅಹಂಕಾರಿಗಳೋ, ವಿಚಾರ ಮಾಡುವ ಶಕ್ತಿಯಿಲ್ಲದವರೋ ಇಲ್ಲವೆ ಕಮ್ಯುನಿಸ್ಟರೋ ಆಗಿರುತ್ತಾರೆ. ಇಂತಹ ಜನರಿಂದೇನೂ ಜಗತ್ತು ನಡೆಯುವುದಿಲ್ಲ. ಇವರ ಪ್ರಭಾವ ಸಮಾಜದ ಸಾಮಾನ್ಯ ಜನರ ಮೇಲೆ ಆಗುವುದೂ ಇಲ್ಲ. ಸಮಾಜದ ಸರ್ವೇಸಾಮಾನ್ಯ ಮನುಷ್ಯನಿಗೆ ದೇವರಲ್ಲಿ ನಂಬಿಕೆ ಇದ್ದೇ ಇದೆ.

ಅದೇನೇ ಇದ್ದರೂ ಜೀವದ ಮುಂದಿನಜನ್ಮ ಮನುಷ್ಯನದಾಗಿರುತ್ತದೆಯೋ ಅಥವಾ ಪ್ರಾಣಿಯದಾಗಿರುತ್ತದೊ, ಜನ್ಮವು ಶ್ರೀಮಂತನ ಮನೆಯಲ್ಲಿ ಆಗುತ್ತದೋ ಇಲ್ಲವೆ ಬಡವನ ಮನೆಯಲ್ಲಿ ಆಗುತ್ತದೋ, ಗಂಡಾಗಿ ಹುಟ್ಟುತ್ತದೆಯೋ ಇಲ್ಲವೆ ಹೆಣ್ಣಾಗಿ ಹುಟ್ಟುತ್ತದೆಯೋ ಎಂಬ ಎಲ್ಲ ತೀರ್ಮಾನಗಳನ್ನು ಭಗವಂತ ಮಾಡುತ್ತಾನೆಯೇ? ಹೌದಾದರೆ ಅವನಿಗೆ ಯಾವುದಾದರೂ ನಿಯಮಗಳಿವೆಯೇ ಇಲ್ಲವೆ ಅವನ ಇಚ್ಛಾನುಸಾರ ಈ ಎಲ್ಲವು ನಡೆಯುತ್ತವೆಯೇ ಎಂಬುದೇ ಮೂಲಪ್ರಶ್ನೆ.

ಪುನರ್‌ಜನ್ಮವು ಭಗವಂತನ ಇಚ್ಛಾನುಸಾರ ಆಗುವುದಿಲ್ಲವೆಂದು ಶಾಸ್ತ್ರಗಳು ಹೇಳುತ್ತವೆ. ಅದು ಜೀವದ ಕರ್ಮಕ್ಕೆ ಪೂರ್ಣವಾಗಿ ಅಧೀನವಾಗಿರುತ್ತದೆ. ಜೀವಕ್ಕೆ ತನ್ನ ಜೀವನವು ಹೇಗಿರಬೇಕೆಂದು, ಎಲ್ಲಿರಬೇಕೆಂದು ನಿಶ್ಚಯಿಸಿಕೊಳ್ಳಲು ಅದು ಸ್ವತಂತ್ರವಾಗಿರುತ್ತದೆ. ಒಂದು ವೇಳೆ ಅದಕ್ಕೆ ಮೋಕ್ಷ ಬೇಕಿದ್ದಲ್ಲಿ ಮುಕ್ತವಾಗಲೂ ಅದಕ್ಕೆ ಸ್ವಾತಂತ್ರ್ಯವಿದೆ. ಅದಕ್ಕೆ ಬಂಧನ ಬೇಕಾದರೆ ಹಾಗೆ ಇರಬಹುದು. ಅದಕ್ಕೆ ಸ್ವರ್ಗ ಬೇಕಿದ್ದರೂ ದೊರೆಯುತ್ತದೆ. ನರಕ ಬೇಕಿದ್ದರೂ ಸಿಗುತ್ತದೆ. ಅದಕ್ಕೆ ಪ್ರಾಣಿಯ ಯೋನಿ ಬೇಕೆಂದರೂ ಸಿಗುತ್ತದೆ, ಉತ್ತಮ ಮನುಷ್ಯನ ಯೋನಿ ಬೇಕೆಂದರೂ ಲಭ್ಯವಿರುತ್ತದೆ. ಒಂದೇ ವಾಕ್ಯದಲ್ಲಿ ಹೇಳುವುದಾದರೆ ಜೀವಕ್ಕೆ ಏನು ಬೇಕೋ ಅದನ್ನು ಪಡೆಯುವ ಸ್ವಾತಂತ್ರ್ಯ ಅದಕ್ಕಿದೆ.

ಷರತ್ತೇನೆಂದರೆ ಏನು ಬೇಕೊ ಅದು ಕೇವಲ ಇಚ್ಛೆಯಿಂದಲೇ ಪ್ರಾಪ್ತವಾಗುವುದಿಲ್ಲ. ಅದಕ್ಕೆ ಪಾತ್ರನಾಗುವಂತಹ ಕಾರ್ಯವನ್ನು ಜೀವವು ಮಾಡಬೇಕಾಗುತ್ತದೆ. ಮತ್ತು ಅದು ಸ್ವಾಭಾವಿಕವೂ ಆಗಿದೆ. ವೈದ್ಯನಾಗಬೇಕಾದರೆ ಹೇಗೆ ವೈದ್ಯವಿದ್ಯೆಯನ್ನು ಓದಬೇಕೋ, ಶ್ರೀಮಂತನಾಗಬೇಕಾದರೆ ಹೇಗೆ ಶ್ರಮಪಟ್ಟು ಸಂಪಾದಿಸಬೇಕೋ ಹಾಗೆ. ಮಥಿತಾರ್ಥ ಇಷ್ಟೇ: ಜನ್ಮ ಯಾವರೀತಿಯದ್ದು ಬೇಕೋ ಅದಕ್ಕೆ ಏನೇನು ಅವಶ್ಯಕತೆಗಳಿವೆಯೋ ಅವನ್ನು ಮಾಡಲೇ ಬೇಕು, ಯಾವುದೂ ಉಚಿತವಾಗಿ ಲಭ್ಯವಾಗುವುದಿಲ್ಲ.

ಇದನ್ನೇ ಪುರುಷಾರ್ಥ ಇಲ್ಲವೇ ಪ್ರಯತ್ನ ಎನ್ನುವುದು. ಇದನ್ನು ಕರ್ಮ ಎನ್ನುತ್ತೇವೆ ಮತ್ತು ಕರ್ಮವನ್ನು ಮಾಡುವುದರಿಂದ ಲಭಿಸುವುದನ್ನು ಕರ್ಮಫಲ ಎನ್ನುತ್ತೇವೆ. ಕರ್ಮಫಲ ಎಂದರೆ ಯಾವುದು ಕರ್ಮವನ್ನು

ಮಾಡಿದ್ದರ ಫಲವೋ ಅದು. ಕರ್ಮದ ಪರಿಣಾಮ ಅದು. ಇದೂ ಸ್ವಾಭಾವಿಕವೇ ಆಗಿದೆ. ಹೇಗೆ ಅಧ್ಯಯನ ಮಾಡಿರುತ್ತೇವೆಯೋ ಹಾಗೆಯೇ ಪರೀಕ್ಷೆಯ ಫಲ ಬರುತ್ತದೆಯಲ್ಲವೆ? ಹಾಗೆ. ಯಾವ ಬಗೆಯ ಆಹಾರ ಸೇವಿಸುತ್ತೇವೆಯೋ ಅದೇ ವಾಸನೆಯ ತೇಗು ಬರುತ್ತದೆ. ಇದೇ ರೀತಿಯಲ್ಲಿ ಯಾವ ಬಗೆಯ ಕರ್ಮಗಳನ್ನು ಮಾಡುತ್ತೇವೆಯೋ ಅದೇ ಬಗೆಯ ಫಲಗಳು ಲಭ್ಯವಾಗುತ್ತವೆ. ಇಲ್ಲಿ ಯಾವುದೇ ಪ್ರಭಾವ ನಡೆಯುವುದಿಲ್ಲ, ಲಂಚ ಎಂಬುದಕ್ಕೆ ಆಸ್ಪದವಿಲ್ಲ, ಕಪಟವಾಗಲಿ, ಭಯವಾಗಲಿ, ಪ್ರಲೋಭನೆಯಾಗಲೀ ಯಾವುದೂ ನಡೆಯುವುದಿಲ್ಲ. ಕರ್ಮ ಮತ್ತು ಕರ್ಮಫಲ ನಿಷ್ಪಕ್ಷಪಾತವಾಗಿರುತ್ತದೆ. ದೇವರೂ ಇದರ ಮಧ್ಯೆ ಪ್ರವೇಶಿಸುವುದಿಲ್ಲ.

ಈ ಕರ್ಮ ಮತ್ತು ಕರ್ಮಫಲದ ನಿಯಮಾನುಸಾರವೇ ಜನ್ಮ ಮತ್ತು ಪುನರ್‌ಜನ್ಮ ಉಂಟಾಗುತ್ತದೆಯೇ ಹೊರತಾಗಿ ಇದಕ್ಕೆ ಅಪವಾದವೇ ಇಲ್ಲ.

ಸರ್ವಸಾಮಾನ್ಯ ಹಿಂದೂ ಜನ ಈ ಸಿದ್ಧಾಂತವನ್ನು ಸ್ವೀಕರಿಸಿಯೇ ನಡೆಯುತ್ತಾರೆ. ಇಂದಿನ ಶಿಕ್ಷಣದಿಂದಾಗಿ ಯಾರು ಜೀವನ ಕುರಿತಾಗಿ ಯೋಚಿಸುವುದಿಲ್ಲವೋ ಅವರು ಅವರ ಅಜ್ಞಾನದ ಕಾರಣದಿಂದಾಗಿ ಈ ಎಲ್ಲವನ್ನು ತಿಳಿಯಲು ಸಾಧ್ಯವಾಗದು. ಇದರ ಪರಿಣಾಮವಾಗಿ ಅವರ ಆಚಾರವಿಚಾರಗಳೂ ಅವ್ಯವಸ್ಥಿತವಾಗುತ್ತದೆ ಮತ್ತು ಇದರ ಪರಿಣಾಮವನ್ನು ಅವರು ಅನುಭವಿಸಲೇ ಬೇಕಾಗುತ್ತದೆ. ಇದರ ಪರಿಣಾಮ ದುಃಖವೇ ಆಗಿರುತ್ತದೆ. ಆದರೆ, ಅವರಿಗೆ ಈ ದುಃಖದ ಮೂಲ ಯಾವುದೆಂಬುದರ ಅರಿವು ಇರುವುದಿಲ್ಲ. ಎರಡನೆಯದಾಗಿ, ಅಜ್ಞಾನದ ಮತ್ತೊಂದು ಪರಿಣಾಮ ಮೌಢ್ಯ. ಇದರಿಂದಾಗಿ ಅವರಿಗೆ ನಿಜವಾದ ದುಃಖ ಯಾವುದು, ನಿಜವಾದ ಸುಖ ಯಾವುದು ಎಂದು ತಿಳಿಯುವುದಿಲ್ಲ. ಆದರೆ, ಆಸ್ತಿಕರು ಹಾಗೂ ದೇವರಲ್ಲಿ ನಂಬಿಕೆಯಿರುವವರು ಕರ್ಮ ಮತ್ತು ಕರ್ಮಫಲದ ಸಿದ್ಧಾಂತವನ್ನು ನೆಮ್ಮಿ ನಡೆಯುತ್ತಾರೆ. ಆದ್ದರಿಂದ ಈ ಲೋಕೋಕ್ತಿಗಳು ನಮಗೆ ಕೇಳಿಬರುತ್ತವೆ:

**ಕರ್ಮದಂತೆ ಬೋಗಸೆ**

**ಕೊಟ್ಟದ್ದೇ ಪಡೆಯುವೆ**

**ಬೇವು ಬಿತ್ತಿ ಬೆಲ್ಲ ನಿರೀಕ್ಷಿಸಿದರೆ**

ಯಾವ ಬಗೆಯ ಕರ್ಮಕ್ಕೆ ಯಾವ ಫಲ ದೊರೆಯುತ್ತದೆ ಎಂಬ ಚರ್ಚೆ ಮಾಡದೆ ಕರ್ಮಾನುಸಾರ ನಮಗೆ ಈ ಜನ್ಮ ಲಭಿಸಿದೆ ಮತ್ತು ಕರ್ಮಾನುಸಾರವೇ ನಮಗೆ ಮುಂದಿನ ಜನ್ಮವೂ ಲಭ್ಯವಾಗುತ್ತದೆ ಎಂಬ ಸಿದ್ಧಾಂತವನ್ನು ಸ್ವೀಕರಿಸಿ ಮುಂದುವರೆಯೋಣ.

ಜನ್ಮ ತಳೆದಿದೆ ಎಂದಾಗ ಮೃತ್ಯುವೂ ಆಗಿದೆ ಎಂಬುದು ಸ್ವಯಂವೇದ್ಯ. ಮೃತ್ಯವಿನ ನಂತರ ಕರ್ಮ ಮತ್ತು ಕರ್ಮ ಫಲ ಎಲ್ಲಿರುತ್ತದೆ? ಶರೀರವನ್ನು ಒಂದೋ ಅಗ್ನಿಗರ್ಪಿಸಲಾಗುವುದು ಇಲ್ಲವೇ ಸಮಾಧಿ ಮಾಡಲಾಗುವುದು. ಸಮಾಧಿ ಮಾಡಿದ ಶರೀರವೂ ಕ್ರಮೇಣ ನಾಶವಾಗಿ ಹೋಗುತ್ತದೆ. ಹಾಗಿದ್ದಾಗ ಈ ಎರಡನೇ ಜನ್ಮ ಹೇಗಾಗುತ್ತದೆ?

ಇದೊಂದು ದೊಡ್ಡ ವಿಚಾರವಾಗಿದ್ದು ಹೆಚ್ಚು ಮಂಥನವಾಗದೇ ಇದನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಜನಸಾಮಾನ್ಯರು ಈ ಒಗಟನ್ನು ಬಿಡಿಸುವ ಸಾಹಸಕ್ಕೆ ಹೋಗುವುದೇ ಇಲ್ಲ. ಅವರು ಕರ್ಮಫಲ ಹಾಗೂ ಪುನರ್‌ಜನ್ಮವನ್ನು ಒಪ್ಪಿಕೊಂಡು "ಒಳ್ಳೆಯವನಾಗಿರು, ಒಳ್ಳೆಯದನ್ನು ಮಾಡು" ಎನ್ನುತ್ತಾರೆ ಇಲ್ಲವೆ ಪಾಪಕಾರ್ಯ ಮಾಡಿ ನರಕಕ್ಕೆ ಹೋಗುವ ಶಿಕ್ಷೆಗೆ ಸಿದ್ಧವಾಗಿರುತ್ತಾರೆ. ಆದರೆ, ಯಾರಿಗೆ ಈ ಎಲ್ಲವೂ ಹೇಗಾಗುತ್ತದೆ ಎಂಬ ಜಿಜ್ಞಾಸೆ ಇದೆ, ಅವರು ಅಗತ್ಯವಾಗಿ ಇದನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡತಕ್ಕದ್ದು.

ಮನುಷ್ಯ ಮರಣಹೊಂದಿದಾಗ ಏನಾಗುತ್ತದೆ? ಇದನ್ನು ತಿಳಿಯಲು ಮನುಷ್ಯನ ಶರೀರ ಎಂಬುದು ಏನು ಮತ್ತು ಅದು ಯಾವುದರಿಂದ ಆಗಿದೆ ಎಂಬುದನ್ನು ತಿಳಿಯಬೇಕಾದ ಅವಶ್ಯಕತೆಯಿದೆ.

ಈ ಸಮಸ್ತ ಸೃಷ್ಠಿಯು ಜಡ ಮತ್ತು ಚೇತನ ಎಂಬ ಎರಡು ಮೂಲ ತತ್ತ್ವಗಳಿಂದ ಆಗಿದೆ. ಇದು ಆಧ್ಯಾತ್ಮವಿದ್ಯೆ ಮಾತ್ರವಲ್ಲದೆ ಬೌದ್ಧಿಕವಿದ್ಯೆಯ ಪ್ರಕಾರವೂ ಸತ್ಯ. ಈ ಎರಡು ತತ್ತ್ವಗಳ ಸಂಯೋಗವಾಗದೇ ಹೋದಲ್ಲಿ ಸೃಷ್ಠಿಯ ರಚನೆ ಆಗುವುದಿಲ್ಲ. ಎರಡೂ ತತ್ತ್ವಗಳು ತಮ್ಮ ಮೂಲರೂಪದಲ್ಲಿಯೇ ಇದ್ದು ರಚನೆಯಾಗುವಾಗ ಅನೇಕ ರೂಪಗಳನ್ನು ಧರಿಸುತ್ತವೆ. ಆ ರೂಪಗಳೆಂದರೆ:

೧. ಮಹತ್

೨. ಅಹಂಕಾರ

೩. ಮನಸ್ಸು

೪. ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ ಎಂಬ ಹೆಸರಿನ ಐದು ಪರಿಮಾಣಗಳು (ತನ್ಮಾತ್ರಗಳು).

೫. ಕಿವಿ, ಚರ್ಮ, ಕಣ್ಣು, ನಾಲಿಗೆ ಮತ್ತು ಮೂಗು ಎಂಬ ಐದು ಜ್ಞಾನೇಂದ್ರಿಯಗಳು

೬. ಕೈ, ಕಾಲು, ಧ್ವನಿ, ಗುದ ಹಾಗೂ ಜನನೇಂದ್ರಿಯಗಳೆಂಬ ಐದು ಕರ್ಮೇಂದ್ರಿಯಗಳು

೭. ಪೃಥ್ವಿ, ನೀರು, ತೇಜಸ್ಸು, ವಾಯ ಮತ್ತು ಆಕಾಶ ಎಂಬ ಪಂಚ ಮಹಾಭೂತಗಳು

ಈ ಎಲ್ಲ ತತ್ತ್ವಗಳ ಸಮೂಹವನ್ನು ಶರೀರ ಎಂದು ಕರೆಯುತ್ತಾರೆ. ನಮಗೆ ಕಾಣುವ ಪ್ರತಿಯೊಬ್ಬ ವ್ಯಕ್ತಿ (ಪ್ರತಿಯೊಂದು ಜೀವಿ) ಈ ಇಪ್ಪತ್ಮೂರು ತತ್ತ್ವಗಳ ಜೊತೆ ಜೊತೆಗೆ ಪುರುಷ ಮತ್ತು ಪ್ರಕೃತಿ ಸೇರಿ ಇಪ್ಪತ್ತೈದು ತತ್ವಗಳಿಂದ ಉಂಟಾಗಿರುತ್ತದೆ.

ಶರೀರಗಳಲ್ಲಿ ಮೂರು ಬಗೆಯವು ಇವೆ:

೧. ಸ್ಥೂಲ ಶರೀರ

೨. ಸೂಕ್ಷ್ಮ ಶರೀರ

೩. ಕಾರಣ ಶರೀರ

ಪೃಥ್ವಿ, ನೀರು, ತೇಜಸ್ಸು, ವಾಯು ಮತ್ತು ಆಕಾಶಗಳಿಂದ (ಪಂಚ ಮಹಾಭೂತಗಳು) ಆದ ಶರೀರವನ್ನು ಸ್ಥೂಲ ಶರೀರ ಎಂದು ಕರೆಯುತ್ತಾರೆ. ಇದು ಸ್ಥೂಲ ಶರೀರ ಏಕೆಂದರೆ ಈ ಶರೀರ ನಮ್ಮ ಕಣ್ಣಿಗೆ ಕಾಣುತ್ತದೆ. ಇದನ್ನು ನಾವು ಮುಟ್ಟಿ ಅನುಭವಿಸಬಹುದು ಹಾಗೂ ಇದರ ವಾಸನೆ ತಿಳಿಯುತ್ತದೆ ಇತ್ಯಾದಿ ಕಾರಣಗಳಿವೆ.

ಸೂಕ್ಷ್ಮ ಶರೀರವು ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು, ಐದು ಪರಿಮಾಣಗಳು (ತನ್ಮಾತ್ರಗಳು), ಮನಸ್ಸು, ಅಹಂಕಾರ ಮತ್ತು ಮಹತ್ ಸೇರಿ ಆಗಿರುತ್ತದೆ. ಈ ಶರೀರಕ್ಕೆ ಯಾವುದೇ ಆಕಾರವಿರುವುದಿಲ್ಲ, ಇದನ್ನು ಮುಟ್ಟಲು (ಸ್ಪರ್ಶಿಸಲು) ಸಾಧ್ಯವಿಲ್ಲವಾದ್ದರಿಂದ ಇದನ್ನು ಸೂಕ್ಷ್ಮಶರೀರ ಎಂದು ಕರೆಯುತ್ತಾರೆ. ಇದು ಯಾವ ಸ್ಥೂಲಶರೀರದಲ್ಲಿರುತ್ತದೋ ಆ ಆಕಾರವನ್ನು ಪಡೆದುಕೊಳ್ಳುತ್ತದೆ.

ಕಾರಣ ಶರೀರವೆಂದರೆ ಪ್ರಕೃತಿ. ಇದರಿಂದಲೇ ಸ್ಥೂಲ ಹಾಗೂ ಸೂಕ್ಷ್ಮಶರೀರಗಳು ಉಂಟಾಗುತ್ತವೆ (ಕಾರಣವಾಗುತ್ತವೆ).

ಮರಣ ಸಂಭವಿಸಿದಾಗ ಇನ್ನೇನು ಆಗುವುದಿಲ್ಲ, ಕೇವಲ ಸೂಕ್ಷ್ಮಶರೀರ ಹಾಗೂ ಸ್ಥೂಲ ಶರೀರಗಳು ಬೇರ್ಪಡುತ್ತವೆ. (ಸ್ಥೂಲ ಹಾಗೂ ಸೂಕ್ಷ್ಮ ಶರೀರಗಳ ಬೇರ್ಪಡುವಿಕೆಯೇ ಸಾವು). ಹೀಗೆ ಬೇರ್ಪಟ್ಟ ಮೇಲೆ ಸ್ಥೂಲ ಶರೀರವನ್ನು

ಮೃತದೇಹ ಎಂದು ಕರೆಯಲಾಗುತ್ತದೆ ಹಾಗೂ ಮೃತದೇಹದ ಅಂತ್ಯಸಂಸ್ಕಾರವನ್ನು ಮಾಡಲಾಗುತ್ತದೆ. ಅಗ್ನಿಗೆ ಸಮರ್ಪಿಸಲಾಗುತ್ತದೆ. ಆಗ ದೇಹದಲ್ಲಿನ ಮಹಾಭೂತಗಳು ಸೃಷ್ಟಿಯ ಮಹಾಭೂತಗಳೊಂದಿಗೆ ಸೇರಿಹೋಗುತ್ತವೆ.

ಆದರೆ, ಸೂಕ್ಷ್ಮ ಶರೀರಕ್ಕೆ ನಾವೇನೂ ಮಾಡಲಾಗುವುದಿಲ್ಲ. ಅದರ ವಿಘಟನೆಯೂ ಆಗುವುದಿಲ್ಲ. ಅದು ತನ್ನ ಒಟ್ಟಾರೆ ಸತ್ವದಿಂದ (ಸಮುಚ್ಚಯದಿಂದ) ಮತ್ತೊಂದು ಸ್ಥೂಲ ಶರೀರವನ್ನು ಸೃಷ್ಟಿಸತೊಡಗುತ್ತದೆ. ಹುಟ್ಟು ಎಂದರೆ ಏನಾಗುತ್ತದೆ? ಸೂಕ್ಷ್ಮ ಶರೀರದಿಂದ 'ಜೀವ'ವು ಆಹಾರವನ್ನು ಪಡೆದುಕೊಂಡು ಹೊಸ ಸ್ಥೂಲಶರೀರವನ್ನು ಮಾಡಿಬಿಟ್ಟಿರುತ್ತದೆ.

ಒಂದು ಜನ್ಮದಿಂದ ಮತ್ತೊಂದು ಜನ್ಮಕ್ಕೆ ಹೋಗುವುದು ಎಂದರೆ ಸೂಕ್ಷ್ಮಶರೀರವು ಒಂದು ಸ್ಥೂಲ ಶರೀರವನ್ನು ಬಿಟ್ಟು ಮತ್ತೊಂದು ಸ್ಥೂಲಶರೀರವನ್ನು ರಚಿಸಿಕೊಳ್ಳುವುದು ಎಂದರ್ಥ. ಹೀಗೆ ಸ್ಥೂಲ ಶರೀರ ಬದಲಾಗುತ್ತಾ ಹೋಗುತ್ತದೆ, ಆದರೆ ಸೂಕ್ಷ್ಮಶರೀರ ಬದಲಾಗುವುದಿಲ್ಲ. ಜೀವವು ಇದ್ದಂತೆಯೇ ಇರುತ್ತದೆ. ಅದಕ್ಕೆ ಅನೇಕ ಜನ್ಮಗಳು ಉಂಟಾಗುತ್ತವೆ.

## ಜನ್ಮ ಪುನರ್‌ಜನ್ಮ ಮತ್ತು ಕರ್ಮಗಳ ಸಂಬಂಧ

ಈ ಜನ್ಮದಲ್ಲಿ ಮಾಡಿದ ಕರ್ಮಫಲಗಳು ಮುಂದಿನ ಜನ್ಮಕ್ಕೆ ಹೇಗೆ ಸಾಗಿಹೋಗುತ್ತವೆ? ಕರ್ಮಗಳನ್ನು ನಮ್ಮ ಸ್ಥೂಲಶರೀರ ಮಾಡಿರುತ್ತದೆ. ಕೆಲಸಗಳನ್ನು ನಮ್ಮ ಕೈ ಮಾಡಿರುತ್ತದೆ. ಚಲನೆಯ ಜವಾಬ್ದಾರಿ ನಮ್ಮ ಕಾಲುಗಳು ತೆಗೆದುಕೊಂಡಿರುತ್ತವೆ. ಬಾಯಿ ಆಹಾರವನ್ನು ಸ್ವೀಕಾರ ಮಾಡಿರುತ್ತದೆ. ಜಠರವು ಆಹಾರವನ್ನು ಜೀರ್ಣಿಸಿರುತ್ತದೆ. ಸ್ಥೂಲಶರೀರವನ್ನು ಅಗ್ನಿಗರ್ಪಿಸಿದಾಗ ಕರ್ಮವು ಏಕೆ ಸುಟ್ಟುಹೋಗುವುದಿಲ್ಲ?

### ಸ್ವಲ್ಪ ಯೋಚಿಸಿ...

ಕರ್ಮವು ಕೇವಲ ಸ್ಥೂಲಶರೀರದಿಂದ ಮಾತ್ರ ಆಗುವುದಿಲ್ಲ. ನಿಜದಲ್ಲಿ ಸ್ಥೂಲಶರೀರವು ಕರ್ಮವನ್ನು ಮಾಡುವುದೇ ಇಲ್ಲ. ಅದು ನಡೆಯುವುದು ಸೂಕ್ಷ್ಮಶರೀರದಿಂದಲೇ.

ಇದು ಹೇಗೆ?

ಸ್ಥೂಲ ಶರೀರವು ಒಂದು ಯಂತ್ರದಂತೆ. ಯಂತ್ರದಂತೆಯೇ ಸ್ಥೂಲಶರೀರವು ನಿರ್ಜೀವವಾಗಿರುತ್ತದೆ. ನಿರ್ಜೀವ ಯಂತ್ರವು ಎಂದಿಗೂ ತಂತಾನೆ ನಡೆಯುವುದಿಲ್ಲ, ಅದನ್ನು ನಡೆಸಬೇಕಾಗುತ್ತದೆ. ಅದರಂತೆಯೇ ನಮ್ಮ ಸ್ಥೂಲಶರೀರವು ತಂತಾನೆ ಕಾರ್ಯನಿರ್ವಹಿಸುವುದಿಲ್ಲ. ಅದರಿಂದ ಕಾರ್ಯ ಮಾಡಿಸುವುದು ಸೂಕ್ಷ್ಮ ಶರೀರವೇ ಆಗಿರುತ್ತದೆ.

ಸೂಕ್ಷ್ಮ ಶರೀರವು ಹೇಗೆ ಸ್ಥೂಲಶರೀರದಿಂದ ಕೆಲಸ ಮಾಡಿಸುತ್ತದೆ ಎಂಬುದನ್ನು ವಿಸ್ತಾರವಾಗಿ ಈಗ ನಾವು ನೋಡುವುದಿಲ್ಲ. ಬದಲಿಗೆ ಕೇವಲ ಎರಡು ಶರೀರಗಳ ಸೂಕ್ಷ್ಮಶರೀರದ ಸ್ಥೂಲ ಶರೀರವನ್ನು ನಡೆಸುವ ಶಕ್ತಿಯನ್ನು ಸಿದ್ಧಾಂತ ಎಂಬುದಾಗಿ ಒಪ್ಪಿಕೊಂಡು ಮುನ್ನಡೆಯೋಣ.

ಸೂಕ್ಷ್ಮ ಶರೀರವೇ ಸ್ಥೂಲಶರೀರವನ್ನು ಚಾಲಿಸುವುದರಿಂದ ಸೂಕ್ಷ್ಮಶರೀರವೇ ಎಲ್ಲ ಕರ್ಮಗಳನ್ನು ಮಾಡುತ್ತದೆ ಎಂಬುದು ಸ್ವಾಭಾವಿಕವೇ ಆಗುತ್ತದೆ.

ಹಾಗಾಗಿಯೇ, ಎಲ್ಲ ಕರ್ಮಫಲಗಳೂ ಸೂಕ್ಷ್ಮಶರೀರದಲ್ಲಿಯೇ ಇರುತ್ತದೆ. ಅನೇಕ ಜನ್ಮಗಳಲ್ಲಿ ಅದೇ ಸೂಕ್ಷ್ಮಶರೀರವಿರುತ್ತದೆ. ಆದ್ದರಿಂದಲೇ ಕರ್ಮವೂ ಅದರೊಂದಿಗೇ ಇರುತ್ತದೆ.

ಕರ್ಮ ಮತ್ತದರ ಫಲದ ಪರಂಪರೆ ನಡೆಯುತ್ತಲೇ ಇರುತ್ತದೆ. ಕರ್ಮ ಮಾಡಿದೆ. ಅದರ ಫಲ ಸಿಕ್ಕಿತು. ಜೀವವು

ಕರ್ಮವನ್ನು ಮಾಡುತ್ತದೆ. ಫಲವನ್ನು ಉಣ್ಣುತ್ತದೆ. ಕರ್ಮದ ಅನುಸಾರವೇ ಫಲವು ಒಳ್ಳೆಯದೂ ಆಗಿರುತ್ತದೆ, ಕೆಟ್ಟದ್ದೂ ಆಗಿರುತ್ತದೆ. ಅದು ನಮಗೆ ಹೊಂದಬಹುದು ಇಲ್ಲವೇ ಹೊಂದದೇ ಇರಬಹುದು. ಅನುಭವದಲ್ಲಿ ಜೀವಕ್ಕೆ ಹೀಗೂ ಅನಿಸಬಹುದು. ಕರ್ಮ ಇಷ್ಟವಾಗದಿರಬಹುದು. ಆದರೆ, ಕರ್ಮಫಲ ಇಷ್ಟವಾಗಬಹುದು. ಕರ್ಮ ಇಷ್ಟವಾಗಬಹುದು ಆದರೆ ಕರ್ಮಫಲ ಇಷ್ಟವಾಗದಿರಬಹುದು. ಉದಾಹರಣೆಗೆ ಅಧ್ಯಯನ ಮಾಡುವುದು ಇಷ್ಟವಾಗದಿರಬಹುದು ಆದರೆ ಉತ್ತಮ ಫಲಿತಾಂಶ ಬಂದಾಗ ಇಷ್ಟವಾಗುತ್ತದೆ. ಕೇವಲ ಒಳ್ಳೆಯ ರುಚಿಯುಳ್ಳ ಆಹಾರವನ್ನು ತಿನ್ನುವ ಕಾರ್ಯ ಇಷ್ಟವಾಗಬಹುದು ಆದರೆ ಅದರ ಫಲವಾಗಿ ಬರುವ ರೋಗ ಹಿತವಾಗಿರುವುದಿಲ್ಲ. ಒಳ್ಳೆಯ ಸಂತಾನ ಬೇಕು ಆದರೆ ಅದಕ್ಕಾಗಿ ಮಾಡಬೇಕಾದ ಉಪಾಸನೆ ಬೇಡ. ಆದರೆ, ಇದು ಎಂದಿಗೂ ನಡೆಯದು. ಕರ್ಮ ಮಾಡಿದರಷ್ಟೇ ಫಲವು ಲಭ್ಯವಾಗುತ್ತದೆ. ಕರ್ಮ ಮಾಡಿದರೆ ಮಾತ್ರವೇ ಫಲ ದೊರೆಯುತ್ತದೆ. ಈ ಎರಡನ್ನೂ ಬೇರೆ ಬೇರೆ ಮಾಡಲು ಬರುವುದಿಲ್ಲ.

ಕರ್ಮವನ್ನು ಮಾಡಿರಿ. ಫಲ ಸಿಕ್ಕೇ ಸಿಗುತ್ತದೆ. ಫಲವನ್ನು ಅನುಭವಿಸುತ್ತಾ ಅನುಭವಿಸುತ್ತಾ ಹೊಸ ಕರ್ಮಗಳು ನಡೆಯುತ್ತವೆ. ಇದರಿಂದ ಹೊಸ ಫಲಗಳು ಲಭ್ಯವಾಗುತ್ತವೆ. ಕರ್ಮ ಮಾಡುವುದೂ ನಿಲ್ಲುವುದಿಲ್ಲ, ಫಲವನ್ನು ಅನುಭವಿಸುವುದೂ ನಿಲ್ಲುವುದಿಲ್ಲ. ಫಲವನ್ನು ಅನುಭವಿಸುವುದೂ ಒಂದು ಕರ್ಮವಾಗಿಬಿಡುತ್ತದೆ.

ಸೂಕ್ಷ್ಮಶರೀರವೇ ಕರ್ಮವನ್ನು ಮಾಡುತ್ತದೆ ಮತ್ತು ಫಲವನ್ನು ಅನುಭವಿಸುತ್ತದೆ. ಆದರೆ ಇದು ಸ್ಥೂಲ ಶರೀರದ ಆಶ್ರಯದಲ್ಲಿ ಆಗುತ್ತದೆ. ಸ್ಥೂಲಶರೀರದ ಮಾಧ್ಯಮದಲ್ಲಿಯೇ ನಡೆಯಬೇಕು. ಆದ್ದರಿಂದಲೇ ಕರ್ಮ ಮತ್ತು ಅದರ ಫಲಗಳ ಪರಂಪರೆ ಎಲ್ಲಿಯವರೆಗೂ ಪೂರ್ಣವಾಗುವುದಿಲ್ಲವೋ ಅಲ್ಲಿಯವರೆಗೆ ಒಂದರ ನಂತರ ಒಂದು ಸ್ಥೂಲ ಶರೀರವನ್ನು ಧರಿಸಲೇ ಬೇಕಾಗುತ್ತದೆ. ಕರ್ಮ ಸವೆಯುವವರೆಗೂ ಹೊಸ ಜನ್ಮಗಳನ್ನು ಎತ್ತಲೇ ಬೇಕಾಗುತ್ತದೆ ಎಂಬುದು ಇದರ ಅರ್ಥ.

ಈ ಎಲ್ಲ ಕರ್ಮದ ಫಲವನ್ನು ವ್ಯಕ್ತಿ ಅನುಭವಿಸುವವರೆಗೂ ಸೂಕ್ಷ್ಮ ಶರೀರದಲ್ಲಿ ಸಂಸ್ಕಾರವಾಗಿ ಜಮೆಯಾಗಿರುತ್ತದೆ. ಸಂಸ್ಕಾರದಲ್ಲಿ ಇದು ಸೇರುತ್ತಲೇ ಇರುತ್ತದೆ. ಆದ್ದರಿಂದ ಸಂಸ್ಕಾರವು ಸಂಸ್ಕಾರಗಳ ಸಂಗ್ರಹವೇ ಆಗಿದೆ. ಇದನ್ನು ಸಂಸಾರ ಶರೀರವೆಂದೂ ಕರೆಯಬಹುದು.

ಹೀಗೆ ಸೂಕ್ಷ್ಮಶರೀರ ಅಥವಾ ಸಂಸ್ಕಾರಶರೀರವು ಹೊಸ ಸ್ಥೂಲಶರೀರವನ್ನು ಹುಡುಕುತ್ತಿರುತ್ತದೆ.

ಸೂಕ್ಷ್ಮಶರೀರವು ತತಗೆ ಯೋಗ್ಯವಾದ ಸ್ಥೂಲಶರೀರವನ್ನು ಹುಡುಕುತ್ತದೆ.

ಸೂಕ್ಷ್ಮಶರೀರವು ತತಗೆ ಯೋಗ್ಯವಾದ ಹೊಸ ಸ್ಥೂಲಶರೀರವನ್ನು ಹುಡುಕುತ್ತದೆ. ತನಗೆ ಲಾಯಕ್ಕಾದ ಅಥವಾ ಯಾವುದಕ್ಕೆ ಯೋಗ್ಯವೋ ಅದನ್ನು ಹುಡುಕುತ್ತಿರುತ್ತದೆ. ತನಗೆ ಯುಕ್ತವಾದದ್ದು ಎಂದರೇನು? ಯೋಗ್ಯತೆಯು ಹೇಗೆ ನಿರ್ಧಾರವಾಗುತ್ತದೆ? ಯೋಗ್ಯತೆಯು ಸಂಸ್ಕಾರಗಳ ಮೇಲೆ ನಿರ್ಧಾರವಾಗುತ್ತದೆ. ಈ ರೀತಿಯಾಗಿ ಸಂಸ್ಕಾರವು ಅವನ ಕರ್ಮಗಳದ್ದೇ ರೂಪಾಂತರವಾಗಿರುತ್ತದೆ. ಒಳ್ಳೆಯ ಕಾರ್ಯಗಳನ್ನು ಮಾಡಿರುವುದೇ ಆದಲ್ಲಿ ಸಂಸ್ಕಾರವೂ ಒಳ್ಳೆಯದ್ದೇ ಆಗಿರುತ್ತದೆ. ಅಧಮ ಕಾರ್ಯಗಳನ್ನು ಮಾಡಿದ್ದಲ್ಲಿ ಸಂಸ್ಕಾರವೂ ಕೆಟ್ಟದ್ದೇ ಆಗಿರುತ್ತದೆ.

ಸಂಸ್ಕಾರಗಳು ಉತ್ತಮವಾದ್ದದ್ದಾಗಿದ್ದರೆ ಸ್ಥೂಲಶರೀರವೂ ಉತ್ತಮವಾದ್ದದ್ದು ದೊರೆಯುತ್ತದೆ. ಕೆಟ್ಟ ಅಥವಾ ಅಧಮ ಸಂಸ್ಕಾರವಾಗಿದ್ದಲ್ಲಿ ಕೆಟ್ಟ ಸ್ಥೂಲಶರೀರವು ದೊರೆಯುತ್ತದೆ.

ಯಾವ ಬಗೆಯ ಶರೀರ ದೊರೆಯುತ್ತದೆ ಎಂಬುದು ಖುದ್ದು ಅವನದ್ದೇ ಕರ್ಮಗಳ ಮೇಲೆ ಅವಲಂಬಿತವಾಗಿರುತ್ತದೆ.

ಈ ಸ್ಥೂಲ ಶರೀರ ಅವನಿಗೆ ಎಲ್ಲಿ ದೊರೆಯುತ್ತದೆ? ಹೇಗೆ ದೊರೆಯುತ್ತದೆ?

ತಂದೆತಾಯಿಗಳ ಮತ್ತು ಅವರ ಸಂತಾನ ಕುರಿತಾದ ಮೂಲರಹಸ್ಯ ಇದೇ ಆಗಿದೆ.

ಸೂಕ್ಷ್ಮಶರೀರಕ್ಕೆ ಸ್ಥೂಲಶರೀರವು ಪುರುಷನ ವೀರ್ಯದಿಂದ ಮತ್ತು ಸ್ತ್ರೀಯ ರಜದಿಂದ ಲಭ್ಯವಾಗುತ್ತದೆ. ಇದು ಯಾವಾಗ ದೊರೆಯುತ್ತದೆ?

ಕರ್ಮದ ಅನುಸಾರ ಮನುಷ್ಯನ ಯೋನಿಯೂ ಲಭ್ಯವಾಗುತ್ತದೆ, ಪ್ರಾಣಿಯ ಯೋನಿಯೂ ಲಭ್ಯವಾಗಬಹುದಾಗಿರುತ್ತದೆ. ಮರಣದ ಸಮಯದಲ್ಲಿ ಮನಸ್ಸಿನಲ್ಲಿ ಯಾವುದರ ಮೇಲಿರುತ್ತದೆಯೋ ಅದರ ಅನುಸಾರವಾಗಿ ಯಾವ ಯೋನಿ ಎಂಬುದು ನಿರ್ಧಾರವಾಗುತ್ತದೆ. ಜಡಭರತ ಮುನಿಯ ಮನಸ್ಸು ಪ್ರಾಣಿಯ ಮರಿಯ ಮೇಲಿತ್ತು ಹಾಗಾಗಿ, ಅವನಿಗೆ ಪ್ರಾಣಿಯ ಯೋನಿಯೇ ಸಿಕ್ಕಿತು. ಇದೊಂದು ಪ್ರಸಿದ್ಧವಾದ ಉದಾಹರಣೆ.

ಪುರುಷನ ವೀರ್ಯ ಮತ್ತು ಸ್ತ್ರೀಯ ರಜವು ಸೇರಿ ಸೂಕ್ಷ್ಮಶರೀರಕ್ಕೆ ಸ್ಥೂಲಶರೀರವನ್ನು ನಿರ್ಮಿಸುತ್ತದೆ. ಸೂಕ್ಷ್ಮಶರೀರವು ಪುರುಷ ಮತ್ತು ಸ್ತ್ರೀಯ ವೀರ್ಯ ಮತ್ತು ರಜದಿಂದಾದ ಸ್ಥೂಲಶರೀರವನ್ನು ಸ್ವೀಕರಿಸುತ್ತದೆ ಇಲ್ಲವೇ ಅದರಲ್ಲಿ ಪ್ರವೇಶಿಸುತ್ತದೆ. ಆಗ ಗರ್ಭದಾನವಾಗಿದೆ ಎಂದು ಹೇಳಲಾಗುತ್ತದೆ. ಯಾವ ಪುರುಷ ಮತ್ತು ಸ್ತ್ರೀಯ ವೀರ್ಯ ಮತ್ತು ರಜದಿಂದಾದ ಸ್ಥೂಲಶರೀರವನ್ನು ಸೂಕ್ಷ್ಮಶರೀರವು ಸ್ವೀಕರಿಸುತ್ತದೆಯೋ ಅವರೇ ನಿಮ್ಮ ತಂದೆತಾಯಿಗಳಾಗುತ್ತಾರೆ.

ಪುರುಷ ಮತ್ತು ಸ್ತ್ರೀಯ ವೀರ್ಯ ಮತ್ತು ರಜದಲ್ಲಿ ಏನೇನಿರುತ್ತದೆ? ಅದರಲ್ಲಿ ಪುರುಷ ಮತ್ತು ಸ್ತ್ರೀಯ ಸ್ಥೂಲ ಮತ್ತು ಸೂಕ್ಷ್ಮಶರೀರಗಳ ಸಾರಸತ್ವವಿರುತ್ತದೆ. ಒಬ್ಬನೇ ಪುರುಷ ಮತ್ತು ಸ್ತ್ರೀಯದ್ದು ಮಾತ್ರವಲ್ಲ ಪುರುಷನ ಹದಿನಾಲ್ಕು ಪೀಳಿಗೆ ಮತ್ತು ಸ್ತ್ರೀಯ ಐದು ಪೀಳಿಗೆಗಳ ತಂದೆ ಮತ್ತು ತಾಯಿಯರ ಸ್ಥೂಲ ಮತ್ತು ಸೂಕ್ಷ್ಮಶರೀರಗಳ ಸಾರಸತ್ವವಿರುತ್ತದೆ. (ತಂದೆಯ ಹದಿನಾಲ್ಕು ಪೀಳಿಗೆಗಳು ಮತ್ತು ತಾಯಿಯ ಐದು ಪೀಳಿಗೆಗಳು ಸೇರಿ ಎಷ್ಟು ಪುರುಷರ ವೀರ್ಯ ಮತ್ತು ಎಷ್ಟು ತಾಯಂದಿರ ರಜಸ್ಸು ಒಟ್ಟಾಗಿದೆ ಎಂಬುದನ್ನು ಲೆಕ್ಕಹಾಕಬಹುದು, ಆದರೆ ಅದರ ಅವಶ್ಯಕತೆ ಇಲ್ಲಿ ಇಲ್ಲ). ಸ್ಥೂಲಶರೀರದ ಗುಣಮಟ್ಟ ಈ ರೀತಿಯಾಗಿ ಕುಲ, ವಂಶ, ಗೋತ್ರ, ಪುರುಷ ಮತ್ತು ಸ್ತ್ರೀಯ ವ್ಯಕ್ತಿಗತ ಕರ್ಮ, ಕರ್ಮಫಲ, ಯೋನಿಯ ಶುದ್ಧತೆ ಇತ್ಯಾದಿಗಳನ್ನು ಆಧರಿಸಿರುತ್ತದೆ.

ಸೂಕ್ಷ್ಮಶರೀರದ ಜೀವವು ತನ್ನ ಸಂಸ್ಕಾರದ ಅನುಸಾರ ಈ ಸ್ಥೂಲಶರೀರವನ್ನು ಆರಿಸಿಕೊಳ್ಳುತ್ತದೆ. ಕರ್ಮ ಮತ್ತು ಕರ್ಮಫಲದ ನಿಯಮಾನುಸಾರ ಅದರ ಆರಿಸುವಿಕೆಯೂ ಅದರಿಷ್ಟದಂತೇನೂ ಇರುವುದಿಲ್ಲ, ಅದಕ್ಕೆ ಅದೇ ಸ್ಥೂಲಶರೀರವನ್ನು ಆರಸಿಕೊಳ್ಳಬೇಕಾಗುತ್ತದೆ.

ಸ್ಥೂಲಶರೀರಕ್ಕೆ ಇಷ್ಟವಿದ್ದರೂ ಅದಕ್ಕೆ ಯೋಗ್ಯವಾಗದ ಸೂಕ್ಷ್ಮಶರೀರದ ಹತ್ತಿರವೂ ಬರುವುದಿಲ್ಲ.

ಸೂಕ್ಷ್ಮಶರೀರ ಅಂದರೆ ಬಾಲಕನ ರೂಪದಲ್ಲಿ ಜನ್ಮತಾಳುವ ಜೀವ ಮತ್ತು ಸ್ಥೂಲಶರೀರ ಅಂದರೆ ಬಾಲಕನಿಗೆ ಜನ್ಮನೀಡುವ ತಂದೆತಾಯಿಗಳ ವೀರ್ಯರಜಾತ್ಮಕ ಅಂಶ.

ಇದರಿಂದ ಸಿದ್ಧವಾಗುವ ಅಂಶವೆಂದರೆ ಬಾಲಕನೇ ತಂದೆತಾಯಿಗಳನ್ನು ಆರಿಸಿಕೊಳ್ಳುತ್ತಾನೆ. ತಂದೆತಾಯಿಗಳು ಬಾಲಕನನ್ನು ಆರಿಸಿಕೊಳ್ಳುವುದಿಲ್ಲ. ತಂದೆತಾಯಿಗಳಲ್ಲಿ ಇರುವುದೇನು?

ಶ್ರೀಮದ್ಭಗವದ್ಗೀತೆಯಲ್ಲಿ ಭಗವಂತ ಹೇಳುತ್ತಾನೆ-

ಶುಚಿನೋ ಶ್ರೀಮತೋ ಯೋಗಭ್ರಷ್ಟೋಭಿಜಯತೇ

ಪವಿತ್ರ ಮತ್ತು ಸಿರಿಗಳಿಂದ ಶೋಭಿತರಾದ ತಂದೆತಾಯಿಗಳ ಮನೆಯಲ್ಲಿ ಯೋಗಭ್ರಷ್ಟ ವ್ಯಕ್ತಿಯ ಜನನವಾಗುತ್ತದೆ. ಯೋಗಭ್ರಷ್ಟ ಎಂದರೆ ಯೋಗದ ಸಾಧನೆ ಮಾಡುತ್ತಿರುವ ಸಮಯದಲ್ಲಿ ಗುರಿತಪ್ಪಿ ಹೋದಲ್ಲಿ ಮತ್ತು ಮತ್ತೆ ಸಾಧನೆಯನ್ನು ಆರಂಭಿಸುವ ಮೊದಲೇ ಮೃತ್ಯು ಸಂಭವಿಸಿದರೆ ಅಥವಾ ಸಾಧನೆ ಆರಂಭವಾಗಿ ಮುಗಿಸುವ ಮುನ್ನ

ಆಯುಷ್ಯ ಮುಗಿದು ಹೋದಂತಹ ಜೀವ. ಈ ಜೀವವು ತನ್ನ ಮುಂದಿನ ಜನ್ಮದಲ್ಲಿ ತನ್ನ ಸಾಧನೆಯನ್ನು ಮುಂದುವರೆಸಲು ಸಾಧ್ಯವಾಗುವಂತಹ ತಂದೆತಾಯಿಯರನ್ನೇ ಹುಡುಕುತ್ತದೆ ಮತ್ತು ಪಡೆದುಕೊಳ್ಳುತ್ತದೆ.

ಇದು ನಿಯಮವೇ ಆಗಿದೆ. ಉತ್ತಮವಾದ ಸಂತಾನವು ಬೇಕಾದಲ್ಲಿ ಅದಕ್ಕೆ ಬೇಕಾದ ಯೋಗ್ಯತೆಯನ್ನು ಅರ್ಜಿಸಿ ಅಂತಹ ಸಂತಾನವನ್ನು ತಮ್ಮತ್ತ ಆಕರ್ಷಿಸಿ ಆಮಂತ್ರಣ ಕೊಡಬೇಕು. ಯೋಗ್ಯತೆಯು ಪ್ರಾಪ್ತವಾದ ಕೂಡಲೇ ಉತ್ತಮವಾದ ಆತ್ಮವು ತಾನಾಗಿಯೇ ಹುಡುಕಿಕೊಂಡು ಬರುತ್ತದೆ.

ಶ್ರೀಕೃಷ್ಣನು ಜನ್ಮತಳೆಯಬೇಕಿತ್ತು. ಅವನು ದೇವಕಿ ಮತ್ತು ವಸುದೇವರನ್ನು ಹುಡುಕಿಕೊಂಡ. ಕಾರ್ತೀಕೇಯನ ಜನ್ಮವಾಗಬೇಕಿತ್ತು. ದೇವಿಯರು ಉಮಾಮಹೇಶ್ವರನಿಗೆ ಪ್ರಾರ್ಥನೆಯನ್ನು ಸಲ್ಲಿಸಿದರು. ಕಾರ್ತೀಕೇಯನು ಅವನಲ್ಲಿಗೆ ಬಂದ. ಉಮಾಮಹೇಶ್ವರನ ಮದುವೆಯಾಗುವವರೆಗೂ ಕಾರ್ತಿಕೇಯನು ಕಾಯ್ದುಕೊಂಡಿದ್ದ ಮತ್ತು ಬೇರೆಲ್ಲೂ ಜನ್ಮತಳೆಯಲಿಲ್ಲ ಏಕೆಂದರೆ ಬೇರೆಲ್ಲೂ ಅವನಿಗೆ ಯುಕ್ತವಾದ ಸ್ಥೂಲಶರೀರ ಇರಲಿಲ್ಲ.

ರಾಜಾ ದಿಲೀಪ ಮತ್ತು ರಾಣಿ ಸುದಕ್ಷಣ ತಪ್ಪಸ್ಸನ್ನಾಚರಿಸಿದರು ಆದ್ದರಿಂದಲೇ ರಘುವಿನಂತಹ ಪರಾಕ್ರಮಿ ಮತ್ತು ದಾನಿ ಮಗನು ಅವರಿಗೆ ಜನಿಸಿದನು.

ಇಂತಹ ಅನೇಕ ಉದಾಹರಣೆಗಳು ಪುರಾಣೇತಿಹಾಸಗಳಲ್ಲಿ, ವರ್ತಮಾನದಲ್ಲಿ ದೊರೆಯುತ್ತವೆ. ಈ ಎಲ್ಲವೂ ಒಂದೇ ಮಾತನ್ನು ಹೇಳುತ್ತವೆ - ಒಳ್ಳೆಯ ಸಂತಾನ ಬೇಕೆ? ಹಾಗಿದ್ದರೆ ಒಳ್ಳೆಯ ಸಂತಾನವು ನಿಮ್ಮನ್ನು ಆರಿಸಿಕೊಳ್ಳುವಂತಹ ಯೋಗ್ಯತೆಯನ್ನು ಸಂಪಾದಿಸಿಕೊಳ್ಳಿರಿ.

-

# Unveiling Pūrṇapramati

## A Journey into Holistic Education, Devotion, and Values

रोहित शर्म्मा
Rohit Sharma
Arki, Distt. Solan, Himachal Pradesh

It was a friend, an acquaintance of Pawan Ji Gupta from SIDH, who, aware of my deep interest in experiencing society's efforts to conserve our heritage, suggested that I meet Srinivas Ji at an institution called Pūrṇapramati in Bengaluru. Following that, I contacted Latha Ji, who, on behalf of Pūrṇapramati, extended an invitation for me to visit Bengaluru Pathashala.

I have always had an inclination towards understanding the tradition of Bhartiya Gyan & Kalaa and the system of its propagation. Education is an inherent part of the vistaar of Gyaan and Kalaa. But, I feel that in the present days "Standardization" and "uniformization" in education has ruined the individuality of a child. Thus the expansion of Gyaan & Kalaa has not happened in true sense. Also, because of the Western and Christian approach of the present education model, students are moulded and shaped with a certain mindset that makes them feel as the whole nature is to be tamed to fulfil one's desires. In simple words, children start thinking in a materialist way and there is no shade of spirituality in such schooling.

Due to this condition of education system, I was always driven towards understanding and developoing unconventional avenues of learning which are rooted in the Bhartiya Vichar and Sanskriti and gives maximum opportunity to a child to evolve. To gain a firsthand experience of how the tenets of Bhartiya Shikshan (Indian Education) can be effectively applied in the modern era, I had an exceptional experience of visiting PūrṇaPramati.

Upon my arrival, a teachers' meeting was in progress. Despite my inability to understand Kannada, the dedication and passion of the teachers for their cause were unmistakable. The way all teachers were interacting and discussing, I immediately got the idea that they were not any "employee" here. Their concern for the cause was visible. .

Later, when I met Srinivas "Anna," I delved into the philosophy and emotions underpinning Pūrṇapramati. More than his words, it was Anna's presence and aura that

provided me with a profound sense of the Satvik Sankalp embodied by Pūrṇapramati. Anna explained that Pūrṇapramati operates like a closely-knit family, and I was deeply moved to learn that Swami Vishwesha Tirth Ji of Pejawara Matha was the primary source of inspiration for this sacred endeavor. Even the venerable Prof. G.D. Aggrawal Ji in the last five years of his life was with Pūrṇapramati.

This visit provided me with valuable insights and a deeper understanding of how the Adhyayan can take place in this era of Kali and modernity with most satvik way. I was awestruck to find how beautifully the curriculum has been designed taking into consideration of the Dharmik as well as Aesthetic development of children keeping in mind the demands of present world.

Initially overwhelmed by the extensive curriculum, which included Vyakaran, Shastradhyayana, Tattva Chintan, and Kalaa as compulsory subjects, I soon realized that it was entirely possible to enjoy studying these subjects alongside modern ones. Teaching Samskrit, in particular, aimed at sharpening students' intellect, nurturing viveka, and enabling them to independently study primary texts without relying on translations. The spiritual base we are missing these days can be inculcated by Shaastra Paath.

Acharya Dhananjaya told me that some students of grade 10 even composed Samskrit Shlokas and the Chhanda was almost perfect. I saw that children have memorized so many stotras and Shastra Shlokas. While observing the classes, I found that children of mostly all standards are having jigyasas. Having questions is an indicator of the fertile mind of students as well as the subjects are being taught in an engaging way. Many students, I found were able to perfectly speak Hindi, English, Samskrit & Kannada. I have never been to any institution, where students are trained in four languages. This linguistic training is extremely helpful in the intellectual development of students.

The teacher training module at Pūrṇapramati left a lasting impression on me. Trainee teachers spent around five months assisting senior teachers and began teaching independently only when they felt confident. This approach to teacher training was unlike any I had seen before. Interacting with trainee teachers revealed their self-driven passion to serve this noble cause. They had willingly left financially lucrative careers to be a part of Pūrṇapramati and were entrusted with designing their curriculum framework, honing their critical thinking skills. These were not ordinary teachers but thinkers who evolved daily.

There are some very small observations I would like to mention here, which are generally

overseen but are an indicator of a healthy institution.

As the school hours drew to a close, nobody seemed in a hurry to leave. It was evident that teaching here was not merely a job but a calling. The educators' commitment to nurturing young minds was palpable, and this dedication left an indelible mark on me. Teachers used to discuss many aspects of teaching and the difficulties if they are facing any with Latha akka and Tarun ji. Everybody was so keen on his/her personal development as a teacher.

Positive Ambiance: The institution exuded a profoundly positive and charged ambiance. The cleanliness of the school premises was noteworthy. The attention to detail regarding cleanliness showcased the institution's commitment to providing a healthy and hygienic environment for learning and growth.

Combined with the positive energy of both students and teachers, environment conducive to learning and personal growth was created automatically. It was evident that this positivity was nurtured intentionally.

Efficient Management: The efficient management of Pūrṇapramati was evident in the seamless functioning of the school. Everything seemed to work in harmony, from curriculum planning to day-to-day operations. This efficiency played a pivotal role in creating a conducive learning atmosphere.

Internal Discipline: Discipline at Pūrṇapramati appeared to emanate from within. I did not witness teachers implementing it through strict orders or forceful measures. Instead, it seemed to be a natural part of the institution's ethos, instilled in students through a nurturing approach. I went to the Pre–primary wing and even there also I didn’t find teachers imposing rules and restrictions in any dominating way. I saw, how students of such small age were having their lunch and how they were singing bhajans, and how they were attending classes. Every session was full of Samskaras and teachers were literally love and care personified.

The professionalism and enthusiasm of whole Pūrṇa Pramati Parivaar, whether it is a bus driver or a janitor were evident throughout, and I left feeling both inspired and informed.

Last two days of my Bengaluru visit were dedicated to the Gurukul-vaas at the serene Anandavana. This experience is one that I find challenging to put into words. The spiritual energy that permeated the ashram was very mesmerizing. Brahmcharis (students) were deeply focused on their studies and daily chores, seemingly unaffected by external

distractions. They displayed a subtle awareness of many things, studying Vedas, ShastraTattva, and modern subjects, fully engrossed in their tasks. Their detachment from the outside world was remarkable, and they relished their time there.

Engaging in detailed discussions with Acharya Satyanarayana and Acharya Yadunandana on Swami Vishwesha Tirtharu and various aspects of Gurukul Shikshan was enlightening. Being with Acharya Satya and having a satsang with him had a profound impact had on me. We had long conversations on topics like the concept of punishment, counciling brahmcharis who are entering adolescence. I was amazed to find how lovingly and being in accordance with Shuddha Gurukula paddhati he is able to do all these things along with teaching and managing the gurukula.

He, so confidently said that I never inform brahmcharis about visiting guests in advance. I am confident on the students studying here. They are living proof of what is being taught here. On some of my questions like punishment and students' ichchha of going outside the gurukula, he smilingly said, don't ask me; go and ask any of the brahmchari here directly. He was right, brahmcharis are enjoying living there and Acharyas never even raise their voice to maintain discipline.

In conclusion, my visit to Pūrṇapramati Gurukulam and Anandavana was a journey into an educational realm where devotion, dedication, and values took center stage. The institution's emphasis on holistic development, efficiency, and a nurturing approach to discipline sets it apart as a beacon of innovative education in the modern world.

In the words of Swami Vivekananda: "Education is the manifestation of perfection already in man." Pūrṇapramati exemplifies this by nurturing the innate potential within each student, allowing them to blossom into well-rounded individuals capable of making a positive impact on the world.

After spending nearly ten days here with the staff, I felt like a member of this family. The discussions I had were incredibly fruitful, and I cherished the opportunity to exchange ideas and perspectives. In closing, I extend my heartfelt gratitude to the entire Pūrṇapramati Parivaar for their warm welcome and the invaluable insights they have shared with me.

# ಕನ್ನಡ ಪದಬಂಧ




ನಿಯಮ:

ಪ್ರತಿಪದವೂ 'ಪರಿ' ಇಂದ ಪ್ರಾರಂಭವಾಗಬೇಕು.

ಎಡದಿಂದ ಬಲಕ್ಕೆ :

೧) Nature(4)

೪) Family (4)

೬) Nurse (5)

೯) Practice (4)

ಮೇಲಿನಿಂದ ಕೆಳಕ್ಕೆ

೨) Solution(4)

೩)Paragraph(4)

೫) Comedy(4)

೬) Review (5)

೭) Familiar(4)

೮) Complete(4)

**ನಿಮ್ಮ ಮೆದುಳಿಗೆ ಕಸರತ್ತು ಬೇಕೆ?**

Impossible problems https://mathpickle.com/muse_5/

दशप्रमतिं जनयन्त योषणः

SINCE 2010

# ಪೂರ್ಣಪ್ರಮತಿ

ಪರಿಪೂರ್ಣ ಕಲಿಕಾತಾಣ

ಪರಂಪರಾ ಬೀಜರಕ್ಷಾ ಧ್ಯೇಯ ಮತ್ತು ಸ್ವಧರ್ಮದ
ಸಾಕ್ಷಾತ್ಕಾರಕ್ಕಾಗಿ ವಿದ್ಯಾಸತ್ರಯಾಗದ ದಾರಿಯಲ್ಲಿ

ಪ್ರತಿಷ್ಠಾಪಕ ಸಂರಕ್ಷಕರು :
ಪರಮ ಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದರು,
ಪೇಜಾವರ ಅಧೋಕ್ಷಜ ಮಠ

## ಪೂರ್ಣಪ್ರಮತಿ ಶಿಕ್ಷಕ ತರಬೇತಿಯನ್ನು ಆಯೋಜಿಸಿದೆ

# ಶಿಕ್ಷಣಮ್-ಪರೀಕ್ಷಣಮ್

ನಿಮ್ಮೊಳಗಿನ ವಿದ್ಯಾರ್ಥಿಯನ್ನು ಜಾಗೃತಗೊಳಿಸಿರಿ ಹಾಗೂ
ಅಧ್ಯಾಪಕರಾಗುವ ನಿಮ್ಮ ಕನಸನ್ನು ಸಾಕಾರಗೊಳಿಸಿಕೊಳ್ಳಿ

ಇದೊಂದು ಅಲ್ಪಾವಧಿ ತರಬೇತಿ ಆಗಿದ್ದು ಅನುಭವಾತ್ಮಕ ಕಲಿಕೆಯ ಸ್ವರೂಪದಲ್ಲಿದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ 2020 ಮತ್ತು ಭಾರತೀಯ ಸಾಂಪ್ರದಾಯಿಕ ಗುರುಕುಲ ಪದ್ಧತಿಯ ಚಿಂತನೆಯ ಅಡಿಯಲ್ಲಿ ಈ ತರಬೇತಿಯನ್ನು ರೂಪಿಸಲಾಗಿದೆ.

**ತರಬೇತಿ ಪಡೆದುಕೊಂಡವರು**

- **ತಮ್ಮಲ್ಲಿರುವ ಒಬ್ಬ ಒಳ್ಳೆಯ ವಿದ್ಯಾರ್ಥಿಯನ್ನು ಪರಿಶೋಧಿಸಿಕೊಳ್ಳುವಿರಿ**
- **ಹೊಸದನ್ನು ಕಲಿಯಲು ಮುಕ್ತಮನಸ್ಸನ್ನು ಹೊಂದುವಿರಿ**
- **ಆಧುನಿಕ ಸಮಕಾಲೀನ ವಿದ್ಯೆಗಳು ಮತ್ತು ಸಾಂಪ್ರದಾಯಿಕ ಭಾರತೀಯ ವಿದ್ಯೆಗಳ ಮಧ್ಯೆ ಸಾಮರಸ್ಯವನ್ನು ಅರಿಯಬಲ್ಲವರಾಗುವಿರಿ**
- **ಅನುಭವಾತ್ಮಕ ಕಲಿಕಾ ವಿಧಾನಗಳ ಮೂಲಕ ಕಲಿಸಲು ಸಮರ್ಥರಾಗುವಿರಿ**
- **ನಿಮ್ಮ ಕಲಿಕೆಯು ಅನುಭವಿ ಮಾರ್ಗದರ್ಶಕರಿಂದ ಪ್ರಮಾಣೀಕರಿಸಲ್ಪಡುತ್ತದೆ**

**ತರಬೇತಿ ಕಾರ್ಯಕ್ರಮ**
**ಶೀಘ್ರದಲ್ಲೇ ಪ್ರಾರಂಭವಾಗಲಿದೆ**

ಸ್ಥಳ: 14ನೇ ಅಡ್ಡರಸ್ತೆ, ಹೊಸಕೆರೆಹಳ್ಳಿ ಮುಖ್ಯರಸ್ತೆ,
ಗಿರಿನಗರ, ಬೆಂಗಳೂರು – 560085

96634 74669 / 72590 40610

info@purnapramati.in www.purnapramati.in

SINCE 2010

# pūrṇapramati

A Center for Integrated Learning

**Aiming towards Paramparā bīja Raksā**

Pratiṣṭhāpaka Saṃrakṣaka

PARAMA PŪJYA ŚRĪ VIŚVEŚATĪRTHA ŚRĪPĀDA

PEJĀVARA ADHŌKṢAJA MAṬHA, UDUPI

Purnapramati has organised a Teacher Training Programme

## *Shikshanam Pareekshanam*

Awaken the learner within you and
realise your dream of becoming a teacher

This is a short-term training programme and will follow the experiential learning methodology. This programme has been designed based on traditional Indian gurukula methodology and the NEP 2020.

### After the training programme, trainees will be able to

- Examine the good learner within themselves
- Develop an open mind to learn new things
- Become aware of the harmony between Indian knowledge Systems and modern contemporary knowledge systems
- Develop the capability to teach using experiential learning methods
- Your learning will be facilitated by experienced trainers

*Training Program Starts Soon*

Purnapramati, 14th Cross, Hosakerehalli Main Road, Girinagar, Bengaluru - 560085

96634 74669 / 72590 40610

info@purnapramati.in www.purnapramati.in

ಪ್ರಕಾಶಕರು : **ಪೂರ್ಣಪ್ರಮತಿ**

**ಪರಿಪೂರ್ಣ ಕಲಿಕಾತಾಣ**

ಸಂಪರ್ಕ ವಿಳಾಸ :

14ನೇ ಅಡ್ಡರಸ್ತೆ, ಹೊಸಕೆರೆಹಳ್ಳಿ ಮುಖ್ಯರಸ್ತೆ,
ಗಿರಿನಗರ, ಬೆಂಗಳೂರು – 560085

96634 74669 / 72590 40610

info@purnapramati.in www.purnapramati.in